ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಫೆಬ್ರವರಿ 12, 2025

ಸಂಪುಟ : 51 ಸಂಚಿಕೆ : 271 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಸಮಗ್ರ ಕೃಷಿ ಪದ್ಧತಿ ಅನುಸರಿಸಿದ ರೈತ ಸಾಲಗಾರನಾಗಿಲ್ಲ

### ತರಳಬಾಳು ಹುಣ್ಣಿಮೆ ಎಂಟನೇ ದಿನದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಚೆಲುವನಾರಾಯಣಸ್ವಾಮಿ



ಭರಮಸಾಗರ, ಫೆ. 11- ನಮ್ಮ ನಾಡಿನಲ್ಲಿ ಯಾವುದೇ ಸಂಪನ್ಮೂಲದ ಕೊರತೆ ಇಲ್ಲ. ಬದ್ಧತೆ ಮತ್ತು ಶಿಸ್ತಿನ ಕೊರತೆ ಇರುವ ಕಾರಣ ಅಭಿವೃದ್ಧಿಯ ಹಿನ್ನಡೆ ಕಾಣುತ್ತಿದ್ದೇವೆ. ಸಮಗ್ರ ಕೃಷಿ ಪದ್ಧತಿ ಅನುಸರಿಸಿದ ರೈತ ಸಾಲಗಾರನಾಗಿಲ್ಲ. ಏಕ ಬೆಳೆ ಪದ್ಧತಿ ಅನುಸರಿಸುವ ರೈತ ಮಾತ್ರ ಸಮಸ್ಯೆ ಸುಳಿಗೆ ಸಿಲುಕಿದ್ದಾನೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದರು.

ಇಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಎಂಟನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿರಿಗೆರೆ ಜಗದ್ಗುರುಗಳು ಇಟ್ಟಿರುವ ಬೇಡಿಕೆಗಳನ್ನು ನಾಳೆಯೇ ಪರಿಶೀಲಿಸಿ, ಎಫ್‌ಎಒಗಳಿಗೆ ಬಿಡುಗಡೆಯಾಗ ಬೇಕಾದ ಒಂದು ಕೋಟಿ ಅರವತ್ತು ಲಕ್ಷ ರೂ. ಮತ್ತು ದಾವಣಗೆರೆಯ ತರಳಬಾಳು ಕೃಷಿ ವಿಜ್ಞಾನ ಕೇಂದ್ರಕ್ಕೆ 50 ಲಕ್ಷ ರೂ. ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ರೈತ ಯಾವುದೇ ಕಾರಣಕ್ಕೂ ಆತ್ಮಹತ್ಯೆಗೆ ಒಳಗಾಗಬಾರದು. (2ನೇ ಪುಟಕ್ಕೆ)

### ದೇಶದ ಬೇರು ರೈತ



ಈ ಹಿಂದೆ ರೈತ ದೇಶದ ಬೆನ್ನೆಲುಬು ಎಂದು ಕರೆಯಲಾಗುತ್ತಿತ್ತು. ಆದರೆ ರೈತ ದೇಶದ ನಿಜವಾದ ಬೇರು. ದೇಶಕ್ಕೆ ಅನ್ನ ಕೊಡುವ ಅನ್ನದಾತ. ಅವನಿಗೆ ನೀರು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತರಳಬಾಳು ಹುಣ್ಣಿಮೆ ಮಹೋತ್ಸವದ ಎಂಟನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ದೇವರ ಅನುಗ್ರಹ ಆದರೆ ಸಂಪತ್ತು ಬೆನ್ನ ಹಿಂದೆಯೇ ಬರುತ್ತದೆ. ಸಕಾಲಕ್ಕೆ ಮಳೆ ಬಂದು ಹಳ್ಳ, ಕೊಳ್ಳಗಳಿಗೆ ನೀರು ಬಂದರೆ ಕೆರೆಗಳು ತಾನಾಗಿಯೇ ತುಂಬುತ್ತವೆ. ಭಗವಂತನ ಕೃಪೆಯಿಂದ ಕೆರೆಗಳು ತುಂಬಿದರೆ ರೈತರಿಗೆ ಸಂಪತ್ತು ತಾನಾಗಿಯೇ ಒಲಿದು ಬರುತ್ತದೆ ಎಂದರು.

ನಮ್ಮದೇನು ಪವಾಡವಿಲ್ಲ. ಸರ್ಕಾರದ ಸಹಾಯದಿಂದ ಕೆರೆಗಳಿಗೆ ನೀರು ತುಂಬಿಸುವ ಕಾಯಕ ಮಾಡಿದ್ದೇವೆ. ಇದಕ್ಕಿಂತ ಬಿಚ್ಚುಗತ್ತಿ ಭರಮಣ್ಣ ನಾಯಕನ ಕೆರೆ ನಿರ್ಮಾಣ ಕಾರ್ಯ ಅತ್ಯಂತ ದೊಡ್ಡದು ಎಂದು ಹೇಳಿದರು.

ನಿಜವಾದ ಭಗೀರಥರು ರಾಜೇಂದ್ರ (2ನೇ ಪುಟಕ್ಕೆ)

## ನೂತನ ಕೈಗಾರಿಕಾ ನೀತಿ

ಬೆಂಗಳೂರು, ಫೆ. 11 - ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಕೈಗಾರಿಕಾ ನೀತಿ 2025 - 30 ಅನ್ನು ಅನಾವರಣಗೊಳಿಸಿದ್ದಾರೆ. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕೈಗಾರಿಕಾ ನೀತಿಯನ್ನು ಪ್ರಕಟಿಸಲಾಗಿದೆ.

ಹೈಟೆಕ್ ಉದ್ಯಮದಲ್ಲಿ ಹೂಡಿಕೆಗಾಗಿ ಕರ್ನಾಟಕವನ್ನು ಏಷ್ಯಾದಲ್ಲೇ ಅತ್ಯಂತ ಆಕರ್ಷಕ ತಾಣವಾಗಿ ಮಾಡುವ ಉದ್ದೇಶದೊಂದಿಗೆ ಈ ನೀತಿಯನ್ನು ರೂಪಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, ಸುಸ್ಥಿರ ಅಭಿವೃದ್ಧಿ ಗುರಿಯೊಂದಿಗೆ ಈ ಯೋಜನೆ ರೂಪಿಸಲಾಗಿದೆ. ಯೋಜನಾ ಅವಧಿಯಲ್ಲಿ 7.5 ಲಕ್ಷ ಕೋಟಿ ರೂ.ಗಳ ಹೂಡಿಕೆ ತರುವ ಹಾಗೂ 20 ಲಕ್ಷ ಹೊಸ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ಆಚೆಗಿನ ವಲಯಗಳಲ್ಲಿ ಸಮತೋಲನದ ಅಭಿವೃದ್ಧಿ ತರುವ ಉದ್ದೇಶದಿಂದ ಹಾಗೂ ವಿಶೇಷವಾಗಿ ಹಿಂದುಳಿದ ಪ್ರದೇಶಗಳಿಗೆ ಕೈಗಾರಿಕಾ ಉತ್ತೇಜನ ನೀಡುವ ಗುರಿಯೊಂದಿಗೆ ಈ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ನೂತನ ಕೈಗಾರಿಕಾ ನೀತಿಯ ಬಗ್ಗೆ ಮಾತನಾಡಿರುವ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಈ (5ನೇ ಪುಟಕ್ಕೆ)

### ನೂತನ ಏಕಗವಾಕ್ಷಿ ಹೂಡಿಕೆ ವ್ಯವಸ್ಥೆಗೆ ಚಾಲನೆ

ಬೆಂಗಳೂರು, ಫೆ. 12 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ನೂತನ ಏಕಗವಾಕ್ಷಿ ಹೂಡಿಕೆ ವ್ಯವಸ್ಥೆಗೆ ಚಾಲನೆ ನೀಡಿದ್ದಾರೆ. ರಾಜ್ಯದಲ್ಲಿ ಹೂಡಿಕೆ ಪ್ರಕ್ರಿಯೆ ಸುಲಭಗೊಳಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ನೂತನ ವ್ಯವಸ್ಥೆಯಲ್ಲಿ ಹೂಡಿಕೆ ಅನುಮತಿ ಸರಳವಾಗಲಿದೆ. ನಿಯಮಗಳ ಪಾಲನೆ ಹೊರೆ ಕಡಿಮೆಯಾಗಲಿದೆ ಹಾಗೂ ಕೈಗಾರಿಕಾ ಹೂಡಿಕೆಗಳಿಗೆ ಶೀಘ್ರ ಪಥದಲ್ಲಿ ಅನುಮೋದನೆ ನೀಡಲಾಗುವುದು. ಪಾರದರ್ಶಕತೆ ಹಾಗೂ ದಕ್ಷತೆ ಕಾಯ್ದುಕೊಂಡು ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ನೂತನ ಸೇವೆಯಲ್ಲಿ 30 ಇಲಾಖೆಗಳ 150 ಉದ್ಯಮ ಸೇವೆಗಳು ಬರಲಿವೆ. ಇದರಲ್ಲಿ ಹೂಡಿಕೆಯ ಅನುಮೋದನೆ ಸ್ಥಿತಿಗತಿ ತ್ವರಿತವಾಗಿ ತಿಳಿಯಲಿದೆ. ಇದರಿಂದಾಗಿ ಹೂಡಿಕೆದಾರರು ಮಾಹಿತಿಗಳನ್ನು ಪಡೆದು ವಿಳಂಬವಿಲ್ಲದೆ ತಿದ್ದುಪಡಿ ಹಾಗೂ ನವೀಕರಣಕ್ಕೆ ಮುಂದಾಗಬಹುದು ಎಂದು ಮುಖ್ಯಮಂತ್ರಿ (5ನೇ ಪುಟಕ್ಕೆ)

## ಚಿತ್ರದುರ್ಗ : ವೊರೊನೆಜ್ ರೇಡಾರ್ ಅಳವಡಿಕೆ



ಚಿತ್ರದುರ್ಗ, ಫೆ. 11 - ಚಿತ್ರದುರ್ಗದ ನಾಯಕನಹಟ್ಟಿಯಲ್ಲಿ ವೈಮಾನಿಕ ರಕ್ಷಣೆಗೆ ಆಧುನಿಕ ರೇಡಾರ್ ಅಳವಡಿಸುವ ಸಿದ್ಧತೆಗಳು ನಡೆದಿವೆ.

ರಷ್ಯಾದ ಅತ್ಯಾಧುನಿಕ ವೊರೊನೆಜ್ ರೇಡಾರ್ ಅಳವಡಿಕೆ ಮಾಡಲು ಆ ದೇಶದ ಜೊತೆ ಭಾರತ ನಡೆಸಿರುವ ಮಾತುಕತೆ ಮುಂಚೂಣಿ ಹಂತಕ್ಕೆ ತಲುಪಿದೆ. ಇದರಿಂದಾಗಿ ದೇಶದ ಕ್ಷಿಪಣಿ ರಕ್ಷಣಾ ವ್ಯವಸ್ಥೆ ಮತ್ತಷ್ಟು ಬಲವಾಗಲಿದೆ ಹಾಗೂ ವೈಮಾನಿಕ ನಿಗಾ ವ್ಯವಸ್ಥೆ ಹೆಚ್ಚಾಗಲಿದೆ.

ಸುಮಾರು 8 ಸಾವಿರ ಕಿಲೋಮೀಟರ್ ದೂರದಲ್ಲಿರುವ 500 ಸಂಖ್ಯೆವರೆಗಿನ ವಸ್ತುಗಳನ್ನು ಗುರುತಿಸುವ ಸಾಮರ್ಥ್ಯ ಈ ರೇಡಾರ್ ಹೊಂದಿದೆ ಎಂದು ವರದಿಗಳು ತಿಳಿಸಿವೆ. ರಷ್ಯಾದ ವೊರೊನೆಜ್ - ಡಿಎಂ ಮಾದರಿಯ ರೇಡರ್ 8000 ಕಿಲೋಮೀಟರ್ (2ನೇ ಪುಟಕ್ಕೆ)

## ಬಿಜೆಪಿ ಭಿನ್ನಮತಕ್ಕೆ ತೆರೆ


**ರಾಜ್ಯಾಧ್ಯಕ್ಷ- ವಿಪಕ್ಷ ನಾಯಕರ ಬದಲಾವಣೆ ಮಾಡದಿರಲು ವರಿಷ್ಠರ ತೀರ್ಮಾನ**

ಬೆಂಗಳೂರು,ಫೆ. 11- ರಾಜ್ಯ ಬಿಜೆಪಿಯಲ್ಲಿನ ಭಿನ್ನಮತಕ್ಕೆ ತೆರೆ ಎಳೆದಿರುವ ಪಕ್ಷದ ವರಿಷ್ಠರು ರಾಜ್ಯಾಧ್ಯಕ್ಷ ಹಾಗೂ ವಿಧಾನಸಭಾ ಪ್ರತಿಪಕ್ಷ ನಾಯಕರ ಬದಲಾವಣೆ ಮಾಡದಿರಲು ತೀರ್ಮಾನಿಸಿದ್ದಾರೆ.

ಆದರೆ, ಪಕ್ಷದ ಕಾರ್ಯಕಾರಿ ಮತ್ತು ಕೋರ್ ಕಮಿಟಿಯಲ್ಲಿ ಸಣ್ಣ-ಪುಟ್ಟ ಬದಲಾವಣೆ ಮಾಡಿ ಕೆಲವರನ್ನು ಕೈಬಿಟ್ಟು, ಕೆಲವರನ್ನು ಸೇರ್ಪಡೆ ಮಾಡುವಂತೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸೂಚಿಸಿದ್ದಾರೆ.

ವರಿಷ್ಠರ ತೀರ್ಮಾನದ ಹಿನ್ನೆಲೆಯಲ್ಲಿ ನಾಳೆ ವಿಜಯೇಂದ್ರ ಪರ ಖಾಸಗಿ ಹೋಟೆಲ್‌ನಲ್ಲಿ ನಡೆಯಬೇಕಿದ್ದ ಬೃಹತ್ ಶಕ್ತಿ ಪ್ರದರ್ಶನ ಕಾರ್ಯಕ್ರಮ ರದ್ದುಗೊಂಡಿದೆ. ಕೋರ್ ಕಮಿಟಿ ಹಾಗೂ ಪದಾಧಿಕಾರಿಗಳ ಪಟ್ಟಿಯಲ್ಲಿ ಪರಿಷ್ಕರಣೆ ಮಾಡಿರುವ ವರಿಷ್ಠರು ಯಾರನ್ನು ಸೇರ್ಪಡೆ (2ನೇ ಪುಟಕ್ಕೆ)

## ಸಂವಿಧಾನದ ಅಧಿಕೃತ ಆವೃತ್ತಿಯನ್ನೇ ಮುದ್ರಿಸಬೇಕು, ಉಲ್ಲಂಘನೆ ಗಂಭೀರ



ನವದೆಹಲಿ,ಫೆ. 11 - ಸಂವಿಧಾನದ ನಿರ್ಮಾತೃಗಳ ಸಹಿ ಹಾಗೂ 22 ಚಿತ್ರಗಳನ್ನು ಹೊಂದಿರುವ ಪ್ರತಿಯೇ ಅಧಿಕೃತವಾಗಿದೆ. ಇದನ್ನು ಉಲ್ಲಂಘಿಸಿ ಸಂವಿಧಾನದ ಪ್ರತಿ ಮುದ್ರಿಸುವುದು ಗಂಭೀರ ವಿಷಯ. ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಮಾತನಾಡಿದ ಬಿಜೆಪಿ ಸಂಸದ ರಾಧಾ ಮೋಹನ್ ದಾಸ್ ಅಗರ್ವಾಲ್, ಪ್ರಸಕ್ತ ದೇಶದಲ್ಲಿ ಮಾರಲಾಗುತ್ತಿರುವ ಬಹುತೇಕ ಸಂವಿಧಾನದ ಪ್ರತಿಗಳಲ್ಲಿ 22 ಚಿತ್ರಗಳು ಕಣ್ಮರೆಯಾಗಿವೆ. ಮೂಲ ಚಿತ್ರಗಳನ್ನು ಸಂವಿಧಾನದ ಪ್ರತಿಗಳಲ್ಲಿ ಪ್ರಕಟಿಸಬೇಕು ಎಂದು ಹೇಳಿದರು.

ಇದು ಸದನದಲ್ಲಿ ತೀವ್ರ ಚರ್ಚೆಗೆ ಕಾರಣವಾಯಿತು (2ನೇ ಪುಟಕ್ಕೆ)


## ಹೆದ್ದಾರಿ 173 ಆನಗೋಡುವರೆಗೂ ವಿಸ್ತರಿಸಲು ಸಂಸತ್‌ನಲ್ಲಿ ಪ್ರಸ್ತಾಪ



ದಾವಣಗೆರೆ. ಫೆ. 11 - ರಾಷ್ಟ್ರೀಯ ಹೆದ್ದಾರಿ-173 ಮೂಡಿಗೆರೆಯಿಂದ ಹೊಳಲ್ಕೆರೆವರೆಗೆ ಇದ್ದು NH 369 ಬಳಿ ಮುಕ್ತಾಯಗೊಂಡಿದೆ. ಇದೇ ಹೆದ್ದಾರಿಯನ್ನು ಹೊಳಲ್ಕೆರೆಯಿಂದ ಚಿಕ್ಕಜಾಜೂರಿನ ಮೂಲಕ ಹಾದುಹೋಗಿರುವ ರಾಜ್ಯ ಹೆದ್ದಾರಿ 47ರ ಆನಗೋಡು ಸಮೀಪದ NH48 ವರೆಗೆ ಮೇಲ್ದರ್ಜೆಗೇರಿಸಲು ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ನವದೆಹಲಿಯ ಸಂಸತ್‌ನ ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪಿಸಿದ್ದಾರೆ. ಮುಂದುವರೆದು (2ನೇ ಪುಟಕ್ಕೆ)










**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
**ಆರ್ಚೀಸ್ ಗ್ಯಾಲರಿ**
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
**99862-02299**

**ಮನೆ ಬಾಡಿಗೆಗೆ**
ಪಿ.ಜೆ. ಬಡಾವಣೆ, 8ನೇ ಮೇನ್ ರೋಡ್, 8ನೇ ಕ್ರಾಸ್, #397ರ ಮೊದಲನೇ ಮಹಡಿಯಲ್ಲಿರುವ 20x40 ಅಳತೆಯ 2 ಬೆಡ್ ರೂಮ್, ಹಾಲ್, ಕಿಚನ್ ಹಾಗೂ ನೀರಿನ ಸಂಪೂರ್ಣ ಸೌಕರ್ಯವುಳ್ಳ ಮನೆ ಬಾಡಿಗೆಗೆ ಇದೆ. ವಿಚಾರಿಸಿ : ಸಸ್ಯಹಾರಿಗಳಿಗೆ ಮಾತ್ರ
**94482 48242, 78927 53714**

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹತ್ತಿರ 25x40 West, ವಿದ್ಯಾನಗರದಲ್ಲಿ 30x33 South, ಕೃಷಿ ಕೇಂದ್ರ ಹಿಂಭಾಗ 30x54 North
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಹೊಸಮನೆ & ಸೈಟು ಮಾರಾಟಕ್ಕಿದೆ**
40x40 ಹೊಸ ಮನೆ , 30X40 ಪಶ್ಚಿಮ, ಎಸ್.ಎಸ್. ಬಡಾವಣೆ, ಸೈಟು, 30x40 ಶಾಮ್‌ಸೆ ಬಡಾವಣೆ ಸೈಟು ಉತ್ತರ.
**81500 28457**

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
**91640 54547**

# ಸಂವಿಧಾನದ ಅಧಿಕೃತ ಆವೃತ್ತಿಯನ್ನೇ ಮುದ್ರಿಸಬೇಕು, ಉಲ್ಲಂಘನೆ ಗಂಭೀರ

**(1ನೇ ಪುಟದಿಂದ)** ಹಾಗೂ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈ ವಿಷಯದಲ್ಲಿ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಸಂವಿಧಾನದ ನಿರ್ಮಾತೃಗಳ ಸಹಿ ಇರುವ ಹಾಗೂ 22 ಚಿತ್ರಗಳು ಇರುವ ಸಂವಿಧಾನ ಮಾತ್ರ ಅಧಿಕೃತವಾಗಿದೆ. ಇದರಲ್ಲಿ ಸಂಸತ್ತಿನ ಮೂಲಕ ಜಾರಿಗೆ ತರಲಾದ ತಿದ್ದುಪಡಿಗಳು ಸೇರಿರಬೇಕು. ಇದರಲ್ಲಿ ನ್ಯಾಯಾಂಗ ಇಲ್ಲದೆ ಬೇರೆ ಯಾವುದೇ ಸಂಸ್ಥೆಯಿಂದ ಮಾಡಲಾದ ಬದಲಾವಣೆಯನ್ನು ಒಪ್ಪಲಾಗದು ಎಂದು ಧನಕರ್ ಹೇಳಿದರು.

ಕೇವಲ ಅಧಿಕೃತ ಪ್ರತಿ ಮಾತ್ರ ಪ್ರಸಾರದಲ್ಲಿರುವಂತೆ ಸದನದ ನಾಯಕರು ನೋಡಿಕೊಳ್ಳಬೇಕು. ಇದರಲ್ಲಿ ಯಾವುದೇ ಉಲ್ಲಂಘನೆ ಆದರೆ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯಸಭಾಧ್ಯಕ್ಷರು ಹೇಳಿದರು.

ಈ ವಿಷಯದ ಬಗ್ಗೆ ಮಾತನಾಡಲು ಮೊದಲು ಖರ್ಗೆ ಅವರಿಗೆ ಅವಕಾಶ ನೀಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಖರ್ಗೆ, ಬಿಜೆಪಿ ಅನಗತ್ಯವಾಗಿ ವಿವಾದ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು

ಅಂಬೇಡ್ಕರ್ ಸಂವಿಧಾನದ ಕುರಿತು ಅನಗತ್ಯವಾಗಿ ವಿವಾದ ಸೃಷ್ಟಿಸಲಾಗುತ್ತಿದೆ. ಅಂಬೇಡ್ಕರ್, ಪಟೇಲ್ ಮುಂತಾದವರು ಜೀವಂತವಾಗಿದ್ದಾಗ ಅವರು ಎಂದೂ ಈ ವಿಷಯ ಪ್ರಸ್ತಾಪಿಸಲಿಲ್ಲ. ಈಗ ಹೊಸ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಇದು ವಿವಾದ ಸೃಷ್ಟಿಸುವ ಹಾಗೂ ಅಂಬೇಡ್ಕರ್ ಅವರಿಗೆ ಅವಮಾನಿಸುವ ಪ್ರಯತ್ನವಾಗಿದೆ. ಇದು ತಪ್ಪು ಎಂದು ಆರೋಪಿಸಿದರು.

ಖರ್ಗೆ ಮುಂದುವರೆದು ಮಾತನಾಡಲು ಬಯಸಿದಾಗ ಸಭಾಧ್ಯಕ್ಷರು ಸದನದ ನಾಯಕ ಜೆ.ಪಿ. ನಡ್ಡಾ ಅವರಿಗೆ ಮಾತನಾಡಲು ಅವಕಾಶ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ನಂತರ ಮಾತನಾಡಿದ ನಡ್ಡಾ, ಕಾಂಗ್ರೆಸ್ ಈ ವಿಷಯದಲ್ಲಿ ಆಕ್ಷೇಪ ಮಾಡುತ್ತಿರುವುದು ಏಕೆ? ಎಂದು ಅಚ್ಚರಿ ವ್ಯಕ್ತಪಡಿಸಿದರು.

ಈ ವಿಷಯದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಪ್ರತಿಪಕ್ಷದವರು ಆಗ್ರಹಿಸಬೇಕಿತ್ತು. ಕಾಂಗ್ರೆಸ್ ನಾಯಕರು ಈ ವಿಷಯದಲ್ಲಿ ರಾಜಕೀಯ ಲಾಭ ಪಡೆಯಲು ಪ್ರಯತ್ನ ನಡೆಸಿರುವುದು ದುರಾದೃಷ್ಟಕರ. ಅಂಬೇಡ್ಕರ್ ಅವರಿಗೆ ಅವಮಾನಿಸುವ ಯತ್ನ ನಡೆಸಲಾಗುತ್ತಿದೆ ಎಂದು ಆರೋಪಿಸಿರುವುದು ಸರಿಯಲ್ಲ. ಇದನ್ನು ಸದನದ ಕಡತದಿಂದ ತೆಗೆದು ಹಾಕಬೇಕು ಎಂದು ಒತ್ತಾಯಿಸಿದರು. ಸಂವಿಧಾನದ ನಿರ್ಮಾತೃಗಳ ಆಶಯವನ್ನು ಗಮನದಲ್ಲಿಟ್ಟುಕೊಂಡು ಪ್ರಕಾಶಕರು ಪ್ರತಿಗಳನ್ನು ಮುದ್ರಿಸಬೇಕು. ನಾವೆಲ್ಲರೂ ಅಂಬೇಡ್ಕರ್ ಅವರನ್ನು ಗೌರವಿಸುತ್ತೇವೆ ಎಂದು ನಡ್ಡಾ ಹೇಳಿದರು.

ಅಗರವಾಲ್ ಅವರು ಹೇಳಿರುವಂತೆ ಪ್ರಕಾಶಕರು ಚಿತ್ರಗಳು ಇಲ್ಲದ ಪ್ರತಿಗಳನ್ನು ಪ್ರಕಟಿಸುತ್ತಿದ್ದಾರೆ. ಸಂವಿಧಾನದ ಸ್ಫೂರ್ತಿಯನ್ನು ಹೊಂದಿರುವ ಪ್ರತಿಗಳಷ್ಟೇ ಪ್ರಕಟವಾಗಬೇಕು ಹಾಗೂ ಮಾರುಕಟ್ಟೆಯಲ್ಲಿ ಇವುಗಳಷ್ಟೇ ಲಭ್ಯವಿರಬೇಕು ಎಂಬುದನ್ನು ಸರ್ಕಾರ ಖಚಿತಪಡಿಸಲಿದೆ ಎಂದರು.

ನಂತರ ಮಾತನಾಡಿದ ರಾಜ್ಯಸಭಾಧ್ಯಕ್ಷರು ಸಂವಿಧಾನದ ಪ್ರತಿಯಲ್ಲಿರುವ 22 ಚಿತ್ರಗಳು 5 ಸಾವಿರ ವರ್ಷಗಳ ಸಂಪ್ರದಾಯವನ್ನು ಬಿಂಬಿಸುತ್ತವೆ. ಇವುಗಳನ್ನು ಮುದ್ರಿಸದೇ ಇರುವುದು ಗಂಭೀರ ವಿಷಯ ಎಂದರು.

## ಹೆದ್ದಾರಿ 173 ಆನಗೋಡುವರೆಗೂ ವಿಸ್ತರಿಸಲು ಸಂಸತ್‌ನಲ್ಲಿ ಪ್ರಸ್ತಾಪ

**(1ನೇ ಪುಟದಿಂದ)** ಮಾತನಾಡಿದ ಸಂಸದರು, ಇದನ್ನು ಮೇಲ್ದರ್ಜೆಗೇರಿ ಸುವುದರಿಂದ ಪ್ರಮುಖ ಮಾರ್ಗಗಳಿಗೆ ಪ್ರವೇಶವನ್ನು ಸುಗಮಗೊಳಿಸುವುದರೊಂದಿಗೆ ಮಧ್ಯ ಕರ್ನಾಟಕದ ಪ್ರಮುಖ ಖನಿಜ, ಅಡಿಕೆ ಹಾಗೂ ವಾಣಿಜ್ಯ ಬೆಳೆಗಳನ್ನು ಬಂದರು ನಾಡಾದ ಮಂಗಳೂರಿಗೆ ಸಂಪರ್ಕಿಸುತ್ತದೆ. ಜೊತೆಗೆ ರಫ್ತು ಮಾಡಲು ಉತ್ತೇಜನ ದೊರಕಿದಂತಾಗುತ್ತದೆ ಎಂದು ಪ್ರಸ್ತಾಪಿಸಿದ್ದಾರೆ.

**ನುರಿತ ಕೆಲಸಗಾರರು ಬೇಕಾಗಿದ್ದಾರೆ**
ರಶ್ಮಿ ಮೆನ್ಸ್ ಪಾರ್ಲರ್
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ
**89711 78241**

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 15-02-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ/ಕ್ಲಿನಿಂಗ್ ಕೆಲಸ. ವಯಸ್ಸು 20 ರಿಂದ 30 ವರ್ಷ, ಸಂಬಳ : ರೂ. 12,000/-, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
**97400 98047**

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
**99640 78484**
**95906 15776**

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
**97398 65711, 94822 44114**

**REQUIREMENT**
Qualification : BE in (civil & Electrical) with Java and Python knowledge (Freshers) Require for Faculty (female candidate preferred)
*Work Location : Davanagere*
Whatsap Resume to
**97380 14849**

**ಬೇಕಾಗಿದ್ದಾರೆ**
ಲೋಕಿಕೆರೆ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
**86183 92427**

**ಹೋಟೆಲ್ ಬಾಡಿಗೆಗಿದೆ**
ಶಾಮನೂರು ರಸ್ತೆಯ ಬಾರ್‌ನಲ್ಲಿ ನಾನ್‌ವೆಜ್ ಹೋಟೆಲ್ ನಡೆಸಲು ಬೇಕಾಗಿದ್ದಾರೆ. ಸಂಪರ್ಕಿಸಿ :
**98441 27137**

**ಬೇಕಾಗಿದ್ದಾರೆ**
ವೆಜ್ ಹೋಟೆಲ್‌ಗೆ ಕುಕ್, ಹೆಲ್ಪರ್, ಕಟಿಂಗ್ ಮತ್ತು ರುಬ್ಬುವವರು ಹಾಗೂ ಇತರೆ ಕೆಲಸಕ್ಕೆ ಬೇಕಾಗಿದ್ದಾರೆ.
**99011 60717**

**ಕೆಲಸಕ್ಕೆ ಬೇಕಾಗಿದ್ದಾರೆ**
ಪುರುಷ ಮತ್ತು ಮಹಿಳೆಯರು ಸೆಕ್ಯೂರಿಟಿ ಗಾರ್ಡ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳವಿರುತ್ತದೆ.
**81056 99985, 89715 04492**

**ಮನೆ ಮಾರಾಟಕ್ಕಿದೆ**
ಅಳತೆ 30x50 ಬಾಲಾಜಿ ಬಡಾವಣೆ, ದಾವಣಗೆರೆ.
**81058 65556**
**96208 08309**

**ಮನೆ ಬಾಡಿಗೆಗೆ ಇದೆ**
2BHK, ಬೋರ್‌ವೆಲ್ ಇದೆ. #174/A, ಸಿ ಬ್ಲಾಕ್, 3ನೇ ಮೇನ್, 6ನೇ ಕ್ರಾಸ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
**98442 15950**

**ಟೈಪಿಸ್ಟ್ ಬೇಕಾಗಿದ್ದಾರೆ**
ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಟೈಪಿಂಗ್ ಅನುಭವವುಳ್ಳ ಸ್ವಂತ ಕಂಪ್ಯೂಟರ್ ಉಳ್ಳ ಟೈಪಿಸ್ಟ್ ಬೇಕಾಗಿದ್ದಾರೆ. ಸಂಪರ್ಕಿಸಿ :
**96320 61441**

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
**94489 24273**

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮತ್ತು ಡೆಲಿವರಿ ಬಾಯ್ ಕೆಲಸ ಖಾಲಿ ಇದೆ.
ಕರೆ ಮಾಡಿ :
**74066 59695, 79751 77934**

**ಇಡ್ಲಿರವಾ**
ಬಸವ ಬ್ರಾಂಡ್
Hotel Guarantee
Rs. 42/- kg Loose
whole sale rate
**86603 49026, 87923 00397**

**1946**
**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್ ದಾವಣಗೆರೆ.
**99004 38052, 97401 53513**

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: **Best Lubricants**
Opp. to New Pvt Bus Stand
PB Road, Davangere.
**73380 33337**

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop
Davanagere.
**89519 38228, 80502 22181**

**ವಧು-ವರ ಅನ್ವೇಷಣಾ ಕೇಂದ್ರ**
ಎಲ್ಲಾ ಧರ್ಮದ ವಧು-ವರ ಕೇಂದ್ರ ಇಲ್ಲಿ ಎಲ್ಲಾ ಜಾತಿಯ ವಧು-ವರರನ್ನು ಅನ್ವೇಷಣೆ ಮಾಡಲಾಗುವುದು ಮತ್ತು ಎರಡನೇ ಮದುವೆಗೆ ಸಹ ಅನುಕೂಲವಿದೆ. ಆಸಕ್ತಿ ಇದ್ದವರು ನಿಮ್ಮ ಫೋಟೋ, ಡೀಟೇಲ್ಸ್ ಕಳುಹಿಸಿ
**90367 67840**

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
**85508 36642**

**ಮದ್ಯಪಾನ ಬಿಡಬೇಕೇ ?**
ಉಬ್ಬಸ ರೋಗ, ಕಾಲು ನೋವು, ಅಲರ್ಜಿ, ಮಧುಮೇಹ, ವೈಟ್‌ಗೈನ್ ಮತ್ತು ವೈಟ್ ಲಾಸ್, ಗ್ಯಾಸ್ಟ್ರಿಕ್ ಇತ್ಯಾದಿಗಳಿಗೆ ನಮ್ಮನ್ನು ಸಂಪರ್ಕಿಸಿ. ಪ್ರತಿ ತಿಂಗಳು 12 ಮತ್ತು 13 ರಂದು ವಿಳಾಸ : ಶ್ರೀ ಲಾಡ್ಜ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ.
**ಡಾ।। ಶರ್ಮ**
ಸಮಯ: ಬೆ. 10 ರಿಂದ ಮಧ್ಯಾಹ್ನ 3
ಮೊ. 98869 40831

**WANTED**
ROYAL INSURANCE BROKING (INDIA) PVT Ltd.
Telecaller's & Sales Executive, Marketing Executives
Age : 18 to 27 Salary+Incentive
Quali:Degree, Work place-Davanagere
Walk in Interview -Time:10.30 am-4 pm
**99864 47909**

**ಬೇಕಾಗಿದ್ದಾರೆ**
ಬೆಳ್ಳಿ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ.
ಸಂಪರ್ಕಿಸಿ:
**98445-83442**

**ಮಾರುತಿ ALTO ಮಾರಾಟಕ್ಕಿದೆ**
ರನ್ನಿಂಗ್ ಕಂಡೀಷನ್ ಇರುವ 2006ರ ಮಾಡೆಲ್ ಬಿಳಿ ಬಣ್ಣದ ಮಾರುತಿ ALTO
**94483 23796, 76761 38170**

**CHANGE OF NAME**
MOHAMMED SAKHLAIN (old name) D/o SHAIK HONNUR SAB Resident of # 2071, 1st floor 6th cross, Basha Nagar, Davangere-577001. Davangere Dist. Karnataka Has Changed my name as MOHAMMED SAQLAIN Vide affidavit dated 11.02.2025 sworn before Notary. I.P. Brahmakumar, Davangere. Henceforth all my transactions and dealings will be in my new name MOHAMMED SAQLAIN Sd/- MOHAMMED SAQLAIN

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**3 BHK & 2 BHK ಮನೆ ಬಾಡಿಗೆಗೆ**
ತರಳಬಾಳು ನಗರದ ಹದಡಿ ರಸ್ತೆ ಲಕ್ಷ್ಮೀ ವೆಂಕಟೇಶ್ವರ ಗ್ರಾನೈಟ್ ಹಿಂಭಾಗದಲ್ಲಿ
1 ನೆಲ ಮಹಡಿ - 3 BHK
2. ಮೊದಲನೇ ಮಹಡಿ 2 BHK (ಹೊಸ ಮನೆ) ಕಾರ್ ಪಾರ್ಕಿಂಗ್, ಗಾರ್ಡನ್, ಬೋರ್‌ವೆಲ್, ನಗರ ಪಾಲಿಕೆ ನೀರಿನ ಸೌಲಭ್ಯವಿರುವ ಮನೆಗಳು ಬಾಡಿಗೆಗೆ ಇವೆ.
**82772 51689**

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
1ನೇ ಲಕ್ಕಿ ಡ್ರಾ ವಿನ್ನರ್- ವಿಶ್ವನಾಥ್
**312**
2ನೇ ಲಕ್ಕಿ ಡ್ರಾ ವಿನ್ನರ್- ರಾಘುವೇಂದ್ರ
**882**
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
**ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್**
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮ್ ದಲ್ಲಿ ಆಫೀಸ್ ಕೆಲಸ ಮಾಡಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ 30 ವರ್ಷ ಒಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉದ್ಯೋಗಾರ್ಥಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
**85119 58321, 77995 77272**

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್)
ವಯೋವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
ಉಚಿತ ಊಟ, ವಸತಿ.ಸಂಬಳ 18,000 ರಿಂದ 25,000 ರೂ.ವರೆಗೆ
ವಿದ್ಯಾರ್ಹತೆ : 7th, 10th, PUC, ANM, GNM
**76193 54274**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CRASH COURSE FOR CLASSIC CBSE / SATE**
* End of march to mid of may,
* 5 1/2 hrs. of effective teaching each day, * Maths & Science
**Pi Academy,** Dvg-04
Sri S. Nijalingappa Layout.
**99642 29344, 89513 67178**
**95911 27363**

**ಮನೆಗೊಂದು ಮರ**
**ಊರಿಗೊಂದು ವನ**

## ಭಾಗೀರಥಮ್ಮ ನಿಧನ



ದಾವಣಗೆರೆ ಸಿಟಿ, ಡಿಸಿಎಂ ರಸ್ತೆ ಶಿವ ಚಿದಂಬರ ದೇವಸ್ಥಾನದ ಹತ್ತಿರದ ವಾಸಿ

**ಭಾಗೀರಥಮ್ಮ**

ಇವರು ದಿನಾಂಕ 11.02.2025ರ ಮಂಗಳವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.02.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಸಿರಿಗೆರೆ ವಂಶಸ್ಥರು ಮತ್ತು ಆರ್ಯವೈಶ್ಯ ಬಂಧುಗಳು ಹಾಗೂ ಬಂಧು-ಮಿತ್ರರು.**
**ಕೆ.ಟಿ. ರುದ್ರೇಶ್ ಶ್ರೇಷ್ಠಿ - 97406 81258, ನಿಟ್ಟುವಳ್ಳಿ, ದಾವಣಗೆರೆ.**

## 21ನೇ ವರ್ಷದ ಪುಣ್ಯಸ್ಮರಣೆ



**ಲಿಂ .ಐ.ಪಿ ವಿಶ್ವಾರಾಧ್ಯರವರು**
**ಅಧ್ಯಕ್ಷರು, ಬಾಪೂಜಿ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.**

ಸರ್ವರಿಗೂ ಒಳಿತನ್ನೇ ಬಯಸಿ, ಪ್ರಜ್ವಲಿಸುವ ನಂದಾಜ್ಯೋತಿಯಾಗಿ ಬೆಳಗಿದ ನೀವು ನಮ್ಮೆಲ್ಲರನ್ನೂ ಅಗಲಿ ಇಂದಿಗೆ (12.02.2025) 21 ವರ್ಷಗಳಾದವು. ನೀವು ಸದಾ ನಮ್ಮ ಸ್ಮರಣೆಯಲ್ಲಿದ್ದೀರಿ. ನಿಮ್ಮ ಪವಿತ್ರಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಸಿ.ತಿರುಪಾಲಪ್ಪ ಮತ್ತು ಕುಟುಂಬ ವರ್ಗದವರು**
ಬಾಪೂಜಿ ಕೋ-ಆಪ್. ಬ್ಯಾಂಕ್ ಲಿ., ಹೆಚ್.ಎಂ ರಸ್ತೆ, ದಾವಣಗೆರೆ.

# ಕೃಷಿ ಪದ್ಧತಿ ಅನುಸರಿಸಿದ ರೈತ ಸಾಲಗಾರನಾಗಿಲ್ಲ

**(1ನೇ ಪುಟದಿಂದ)** ಸರ್ಕಾರ ಮತ್ತು ನಾವು ನಿಮ್ಮೊಂದಿಗೆ ಇದ್ದೇವೆ. ತರಳಬಾಳು ಶ್ರೀಗಳು ಕೆರೆಗಳಿಗೆ ನೀರು ತುಂಬಿಸುವ ಕಾಯಕವನ್ನು ಅತ್ಯಂತ ಕಾಳಜಿಯಿಂದ ಮಾಡುತ್ತಿದ್ದು, ಈ ಭಾಗದ ಬರಗಾಲಕ್ಕೆ ತಕ್ಕ ಉತ್ತರ ನೀಡಿದ್ದಾರೆ.

ಸರ್ಕಾರ ಸಹ ರಿವಾರ್ಡ್ ವಿಶ್ವ ಬ್ಯಾಂಕ್ ಯೋಜನೆಯಡಿ ರಾಜ್ಯದಲ್ಲಿ 1.24 ಕೋಟಿ ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗುವುದು ಎಂದು ಹೇಳಿದರು.

ಕೇವಲ ಇಳುವರಿ ಆಸೆಗಾಗಿ ರೈತರು ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಕೆ ಮಾಡದೇ ಸಾವಯವ ಗೊಬ್ಬರ ಬಳಕೆ ಮಾಡುವ ಮೂಲಕ ಭೂಮಿಯ ಸತ್ವ ಉಳಿಸಿಕೊಳ್ಳಬೇಕು ತನ್ಮೂಲಕ ಭೂಮಿಯ ಆರೋಗ್ಯ ಮತ್ತು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಮಾತನಾಡಿ, ಕೇಂದ್ರ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ 5300 ಕೋಟಿ ರೂ. ಘೋಷಣೆ ಮಾಡಿದ್ದಾರೆಯೇ ಹೊರತು, ಇದುವರೆಗೂ ಮಂಜೂರು ಮಾಡದಿರುವುದು ವಿಪರ್ಯಾಸ. ಎಲ್ಲಾ ರೈತ ಸಂಘಟನೆಗಳು ಒಗ್ಗೂಡಿ ಈ ವಿಚಾರವನ್ನು ತರಳಬಾಳು ಜಗದ್ಗುರುಗಳ ಗಮನಕ್ಕೆ ತರಲಾಗಿದ್ದು, ಮುಂಬರುವ ದಿನಗಳಲ್ಲಿ ಇದಕ್ಕೂ ಪರಿಹಾರ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕೃಷಿಗೆ ಜಲಸಂರಕ್ಷಣೆ ಅತಿ ಮುಖ್ಯ. ಈ ಕಾಯಕವನ್ನು ಸಿರಿಗೆರೆ ಸ್ವಾಮೀಜಿಯವರು ಮಾಡುತ್ತಿದ್ದು, ರೈತರು ದೇಶವನ್ನು ಆಹಾರ ಸ್ವಾವಲಂಬಿಯನ್ನಾಗಿ ಮಾಡಿದ್ದಾರೆ. ಈ ಹಿಂದೆ ಅರವತ್ತು ಕೋಟಿ ಜನರಿಗೆ ಆಹಾರ ಇರಲಿಲ್ಲ. ಆದರೆ ಈಗ 130 ಕೋಟಿ ಜನರಿಗೆ ಆಹಾರ ಕೊಟ್ಟು ವಿದೇಶಕ್ಕೂ ಕೊಡುತ್ತಿದ್ದೇವೆ. ಇದು ರೈತರ ಸಾಧನೆ, ಕೋವಿಡ್ ಸಂದರ್ಭದಲ್ಲಿ ಎಲ್ಲಾ ಕಾರ್ಖಾನೆಗಳು ಬಂದಾಗಿದ್ದರೂ, ರೈತರ ಕಾರ್ಖಾನೆ ಮಾತ್ರ ಬಂದ್ ಆಗಿರಲಿಲ್ಲ. ರೈತ ಮಾತ್ರ ಎಂದಿನಂತೆ ನಿತ್ಯ ಕಾಯಕದಲ್ಲಿ ತೊಡಗಿದ್ದು ವಿಶೇಷ ಎಂದರು.

ಕೊರೊನಾ ಸಂದರ್ಭದ ವೇಳೆ ಈ ದೇಶದ ವಾಸಿಗಳ ರೋಗ ನಿರೋಧಕ ಶಕ್ತಿ ಹೆಚ್ಚಿಸುವಂತೆ ಕೆಲಸವನ್ನು ರೈತರು ಮಾಡಿದ್ದಾರೆ. ಜೊತೆಗೆ 84 ಸಾವಿರ ಕೋಟಿ ಜೀವ ರಾಶಿಗೂ ಅನ್ನ ನೀಡಿದರು. ಹಾಗಾಗಿ ರೈತರೇ ಈ ದೇಶದ ಮಾಲೀಕರು. ಮೌಲ್ಯವರ್ಧನೆ ಮಾಡಿದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಪಡಿಸಿದರು.

ಮಾಜಿ ಸಚಿವ ಹೆಚ್. ಆಂಜನೇಯ ಮಾತನಾಡಿ, ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗಬೇಕು. ಯಾವುದೇ ಕಾರಣಕ್ಕೂ ರೈತ ನೇಣಿಗೆ ಶರಣರಾಗಬಾರದು ಎಂದರು.

ತರಳಬಾಳು ಜಗದ್ಗುರುಗಳು ನಾಡಿನ ಕೆರೆಗಳಿಗೆ ನೀರು ತುಂಬಿಸಿ, ರೈತರ ಬಾಳನ್ನು ಹಸನುಗೊಳಿಸಿದ ಹೃದಯವಂತ ಗುರುಗಳು. ರೈತರ ಕಣ್ಣೀರು ಒರೆಸಿದ ಮಾತೃ ಹೃದಯಿ ಶ್ರೀಗಳ ಸೇವೆಯನ್ನು ಕೊಂಡಾಡಿದರು.

ಜಲ ಸಂರಕ್ಷಕ ಮತ್ತು ಸಾಫ್ಟವೇರ್ ಇಂಜಿನಿಯರ್ ಆನಂದ ಮಲ್ಲಿಗಾವಾಡ ಮಾತನಾಡಿ, ನೈಸರ್ಗಿಕವಾಗಿ ಕೆರೆಗಳ ನಿರ್ಮಾಣ ಮತ್ತು ಅವುಗಳ ಸಂರಕ್ಷಣೆ ಬಹುಮುಖ್ಯ. ಈ ನಿಟ್ಟಿನಲ್ಲಿ 12 ರಾಜ್ಯಗಳಲ್ಲಿ ನೈಸರ್ಗಿಕವಾಗಿ ಕೆರೆಗಳನ್ನು ನಿರ್ಮಿಸಲಾಗಿದೆ. ಜನಾಂದೋಲನದ ರೂಪದಲ್ಲಿ ಈ ಕಾರ್ಯವನ್ನು ಕೈಗೊಂಡಿದ್ದು, ಶಾಲಾ-ಕಾಲೇಜುಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ರಾಜಸ್ಥಾನದ ಭಾರತದ ಜಲಸಂರಕ್ಷಕ ಹಾಗೂ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಡಾ. ರಾಜೇಂದ್ರ ಸಿಂಗ್, ಭಾರತೀಯ ಕೃಷಿ ತಂತ್ರಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ವಿ. ವೆಂಕಟಸುಬ್ರಹ್ಮಣ್ಯಂ, ಕರ್ನಾಟಕ ನೀರಾವರಿ ನಿಗಮದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ, ಪುಣೆಯ ಸಂತ ಸಾಯಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಶಿವಲಿಂಗ ಧವಳೇಶ್ವರ್ ಕೃಷಿ ಮತ್ತು ಜಲಸಂರಕ್ಷಣೆ ಕುರಿತು ಮಾತನಾಡಿದರು.

ಶಾಸಕ ಟಿ. ರಘುಮೂರ್ತಿ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಸೇರಿದಂತೆ ಮತ್ತಿತರೆ ಗಣ್ಯರು ಉಪಸ್ಥಿತರಿದ್ದರು

ಆನಂದ ಆರ್. ಪಾಟೀಲ್ ವಚನಗೀತೆ ಹಾಡಿದರು. ಶಶಿ ಪಾಟೀಲ್ ಸ್ವಾಗತಿಸಿದರು. ಮಂಜನಗೌಡ ಶರಣು ಸಮರ್ಪಿಸಿದರು.

## ದೇಶದ ಬೇರು ರೈತ : ತರಳಬಾಳು ಜಗದ್ಗುರು

**(1ನೇ ಪುಟದಿಂದ)** ಸಿಂಗ್ ಅವರು. ಮಳೆ ನೀರು ತುಂಬಿಸುವ . ತರುಣ್ ಭಾರತ್ ಸಂಘ ಸ್ಥಾಪನೆ. ಮಳೆ ನೀರು ಕಣಿವೆಗಳಿರುವ ಜಾಗದಲ್ಲಿ ಒಂದು ಚೆಕ್ ಡ್ಯಾಂ ಮಾಡಿದ್ದಾರೆ. ಅವರ ಸಾಧನೆ ಮಹತ್ತರವಾದುದು ಎಂದರು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತನಾಡಿ, ಕೆರೆಗಳಿಗೆ ನೀರು ತುಂಬಿಸಿ, ರೈತರಿಗೆ ನೆರವಾದ ನಿಜವಾದ ಭಗೀರಥರು ತರಳಬಾಳು ಜಗದ್ಗುರುಗಳು. ಸರ್ಕಾರದ, ಜನಪ್ರತಿನಿಧಿಗಳ ಕಿವಿ ಹಿಂಡಿ ನೀರಾವರಿ ಯೋಜನೆಗಳನ್ನು ರೈತರಿಗೆ ತಲುಪಿಸುವ ಮತ್ತು ರೈತರ ಬಗ್ಗೆ ಅಪಾರ ಕಾಳಜಿಯ ಗಟ್ಟಿತನದ ಸ್ವಾಮೀಜಿ ಎಂದು ಬಣ್ಣಿಸಿದರು.

ಶಿಕ್ಷಣ, ಅನ್ನ ದಾಸೋಹ, ನೀರುಣಿಸುವ ಕೆಲಸ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ತರಳಬಾಳು ಮಠ ಸಮಾಜಕ್ಕೆ ಮಾದರಿಯಾದುದು ಎಂದರು.

ರೈತರು ಕಾಯಕ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಕನಿಷ್ಠ ಪಕ್ಷ ಒಂದು ದೇಸಿ ತಳಿಯ ಹಸುವನ್ನು ಸಾಕುವಂತೆ ಕರೆ ನೀಡಿದರು.

ಮಹಾರಾಷ್ಟ್ರದ ಕನ್ನೇರಿ ಶ್ರೀ ಕ್ಷೇತ್ರ ಸಿದ್ಧಗಿರಿ ಮಹಾಸಂಸ್ಥಾನದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ನೀರು ಅಮೂಲ್ಯವಾದ ಸಂಪತ್ತು. ಇತಿ ಮಿತಿ ಬಳಕೆ, ಮರುಪೂರಣ ವ್ಯವಸ್ಥೆ ಅಗತ್ಯ ಎಂದರು.

ಯಥೇಚ್ಛವಾಗಿ ರಾಸಾಯನಿಕ ಗೊಬ್ಬರ ಬಳಕೆಯಿಂದಾಗಿ ಮಣ್ಣಿನಲ್ಲಿನ ಜೀವಾಣು ನಾಶ ಹೊಂದಿ ಭೂಮಿ ತನ್ನ ಫಲವತ್ತತೆ ಕಳೆದುಕೊಳ್ಳುತ್ತದೆ. ಸಾವಯವ ಗೊಬ್ಬರ ಬಳಕೆ, ಮಳೆ ನೀರು ಇಂಗಿಸುವ ಮೂಲಕ ಅಂತರ್ಜಲ ಹೆಚ್ಚಿಸುವ ಕೆಲಸ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಳೆ ಸಕಾಲಿಕವಾಗಿರದೇ ಅಕಾಲಿಕವಾಗಿದೆ. ನಿಸರ್ಗವನ್ನು ಉಳಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ನೀರಿಲ್ಲದೆ ಬಂಜರು ಭೂಮಿಯಾಗಿ ಪರಿವರ್ತನೆಯಾಗುವ ಸಾಧ್ಯತೆ ಹೆಚ್ಚಾಗಿದೆ. ರೈತ ಜಮೀನಿನ ಸುತ್ತ ಕನಿಷ್ಟ ಒಂದು ಎಕರೆಗೆ 25 ಗಿಡಗಳನ್ನಾದರೂ ನೆಡಲೇಬೇಕು. ಇಲ್ಲದಿದ್ದರೆ ತಾಪಮಾನ ಹೆಚ್ಚಳವಾಗುವ ಸಾಧ್ಯತೆ ಇದೆ. ರೈತರು ಹಸುಗಳನ್ನು ಸಾಕುವ ಜೊತೆಗೆ, ನೀರಿನ ಸದ್ಬಳಕೆ ಮಾಡಿಕೊಳ್ಳುವಂತೆ ಕರೆ ನೀಡಿದರು.

# ಪೊರೊನೆಜ್ ರೇಡಾರ್ ಅಳವಡಿಕೆ

**(1ನೇ ಪುಟದಿಂದ)** ದೂರದಲ್ಲಿರುವ ಫುಟ್ಬಾಲ್ ಗಾತ್ರದ ವಸ್ತುವನ್ನು ಗುರುತಿಸಬಲ್ಲದು. ಇದು ಶೇ.40ರಷ್ಟು ಕಡಿಮೆ ಇಂಧನ ಬಳಸುತ್ತದೆ ಹಾಗೂ ಇದರ ಅಳವಡಿಕೆ ಶೇಕಡ 50 ರಷ್ಟು ವೇಗವಾಗಿದೆ. ಇದು ವಿಶ್ವದ ಅತ್ಯಂತ ಆಧುನಿಕ ಹಾಗೂ ಕಡಿಮೆ ವೆಚ್ಚದ ರೇಡಾರ್ ವ್ಯವಸ್ಥೆಗಳಲ್ಲಿ ಒಂದು ಎಂದು ಹೇಳಲಾಗುತ್ತಿದೆ.

ಖಂಡಾಂತರ ಕ್ಷಿಪಣಿ, ಸಮರ ವಿಮಾನ, ಉಪಗ್ರಹ ಹಾಗೂ ಇತರ ವೈಮಾನಿಕ ಬೆದರಿಕೆಗಳನ್ನು ಇದು ಗುರುತಿಸಬಲ್ಲದು. ಬೆದರಿಕೆ ಅತ್ಯಂತ ದೂರದಲ್ಲಿರುವಾಗಲೇ ಕ್ಷಿಪ್ರವಾಗಿ ಮಾಹಿತಿ ನೀಡಬಲ್ಲದು. ಇದು ಭಾರತದ ಮುಂಚೂಣಿ ಮುನ್ನೆಚ್ಚರಿಕೆಗೆ ಅನುಕೂಲಕರವಾಗಿದೆ.

ಈ ರೇಡಾರ್ ವ್ಯವಸ್ಥೆಯನ್ನು ಅಮೆರಿಕದ ಎಎನ್/ ಎಸ್‌ಪಿವೈ -6 ಹಾಗೂ ಸ್ಪೇಸ್ ಫೆನ್ಸ್‌ಗೆ ಹೋಲಿಕೆ ಮಾಡಲಾಗುತ್ತಿದೆ.

ಇದುವರೆಗೂ ರಷ್ಯಾ ಈ ರಕ್ಷಣಾ ವ್ಯವಸ್ಥೆಯನ್ನು ತನಗಾಗಿ ಮಾತ್ರ ಬಳಸಿಕೊಳ್ಳುತ್ತಿತ್ತು ಹಾಗೂ ಎಂದೂ ರಫ್ತು ಮಾಡಿರಲಿಲ್ಲ. ಭಾರತ ಹಾಗೂ ರಷ್ಯಾ ಈ ರೇಡಾರ್ ವ್ಯವಸ್ಥೆಯ ಖರೀದಿ ಮಾತುಕತೆಯಲ್ಲಿವೆ.

ಇದರ ಪ್ರತಿ ಘಟಕದ ವೆಚ್ಚ 34,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಮೇಕ್ ಇನ್ ಇಂಡಿಯಾ ಅಭಿಯಾನದಲ್ಲಿ ಈ ವ್ಯವಸ್ಥೆಯನ್ನು ಭಾರತದಲ್ಲಿ ಅಭಿವೃದ್ಧಿಗೊಳಿಸಲಾಗುವುದು ಎಂದು ಹೇಳಲಾಗುತ್ತಿದೆ.

ಚಿತ್ರದುರ್ಗ ಸಮುದ್ರ ಮಟ್ಟದಿಂದ 732 ಮೀಟರ್ ಎತ್ತರದಲ್ಲಿದೆ. ಇದರಿಂದಾಗಿ ರೇಡಾರ್ ಗರಿಷ್ಠಸಾಮರ್ಥ್ಯದಲ್ಲಿಕಾರ್ಯನಿರ್ವಹಿಸಬಹುದು. ಹೀಗಾಗಿ ಚಿತ್ರದುರ್ಗವನ್ನು ಆಧುನಿಕ ರೇಡಾರ್ ಅಳವಡಿಕೆಗೆ ಆಯ್ಕೆ ಮಾಡಲಾಗಿದೆ.

ಚಿತ್ರದುರ್ಗದ ನಾಯಕನಹಟ್ಟಿ ಬಳಿಯ ಡಿಆರ್‌ಡಿಒ ಸಂಸ್ಥೆಯಲ್ಲಿ ರೇಡಾರ್ ಅಳವಡಿಕೆ ಮಾಡುವ ಸಿದ್ಧತೆಗಳು ನಡೆದಿದೆ ಎನ್ನಲಾಗಿದೆ.

ಅಲ್ಲದೆ ಚಿತ್ರದುರ್ಗದಲ್ಲಿ ಐಐಎಸ್‌ಸಿ, ಡಿಆರ್‌ಡಿಒ, ಇಸ್ರೋ ಹಾಗೂ ಬಿಎಆರ್‌ಸಿ ರೀತಿಯ ಸಂಸ್ಥೆಗಳಿವೆ. ಹೀಗಾಗಿ ರಕ್ಷಣೆ ಹಾಗೂ ಬಾಹ್ಯಾಕಾಶ ಯೋಜನೆಗಳ ಜೊತೆ ರೇಡಾರ್ ಅಳವಡಿಕೆ ಉಪಯುಕ್ತವಾಗಲಿದೆ.

ಈ ಬಗ್ಗೆ ಮಾತನಾಡಿರುವ ಚಿತ್ರದುರ್ಗ ಮಾಜಿ ಸಂಸದ ಜನಾರ್ದನ ಸ್ವಾಮಿ, ಚಿತ್ರದುರ್ಗ ಭೌಗೋಳಿಕ ಅನುಕೂಲತೆಗಳನ್ನು ಹೊಂದಿದೆ ಹಾಗೂ ಸಾಕಷ್ಟು ಜಮೀನು ಲಭ್ಯವಿದೆ ಎಂದಿದ್ದಾರೆ.

ಈ ಯೋಜನೆ ರಕ್ಷಣಾ ಸಾಮರ್ಥ್ಯ ಹೆಚ್ಚಿಸುವ ಜೊತೆಗೆ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಲಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

## ನಗರದಲ್ಲಿ ಇಂದು ವೀರಭದ್ರೇಶ್ವರ ಸ್ವಾಮಿ ಗುಗ್ಗಳ



ಹುಬ್ಬಳ್ಳಿ ಚೌಡಪ್ಪನ ಗಲ್ಲಿಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ಶಿಲಾಮೂರ್ತಿಯ 25ನೇ ವಾರ್ಷಿಕ ಮಹೋತ್ಸವ, ಬಲಮುರಿ ಶ್ರೀಗಣೇಶ ಶಿಲಾಮೂರ್ತಿಯ 7ನೇ ವಾರ್ಷಿಕ ಮಹೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಸ್ವಾಮಿ ಉಪಾಸಕರಾದ ಲಿಂ. ಗುರುಬಾಯಮ್ಮನವರ 10ನೇ ಪುಣ್ಯಸ್ಮರಣೋತ್ಸವ ಧಾರ್ಮಿಕ ಸಮಾರಂಭದ ಅಂಗವಾಗಿ ಲೋಕ ಕಲ್ಯಾಣಾರ್ಥ ಹಾಗೂ ವಿಶ್ವಶಾಂತಿಗಾಗಿ ಇಂದು ಗುಗ್ಗಳ ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಸಿಂಧಗಿ ಮಠದ ಶ್ರೀ ಸಿಂಧಗಿ ಶಾಂತವೀರೇಶ್ವರ ಪಟ್ಟಾಧ್ಯಕ್ಷರು ಸಾನ್ನಿಧ್ಯ ವಹಿಸಲಿದ್ದಾರೆ.

ಮೇಯರ್ ಕೆ. ಚಮನ್ ಸಾಬ್, ಚಂದ್ರಶೇಖರ ಶಾಸ್ತ್ರಿಗಳು, ಲಿಂಗರಾಜ್ ಹೊಳಿಬಸಯ್ಯ ಹಿರೇಮಠ್, ವೀರಪ್ಪ ಬಿಜ್ಜೂರು, ಲಕ್ಷ್ಮೀ ರವಿ ಬಿಜ್ಜೂರು, ಶಿವನಗೌಡರ ಜ್ಯೋತಿ ಚನ್ನವೀರಗೌಡ್ರು, ಪುಷ್ಪ ಪ್ರಕಾಶ್, ಶಂಕರ ವಜ್ಜಲ, ಮುತ್ತಣ್ಣ, ಕುಸುಮ ಸಂತೋಷ್ ಮುದೇಗೌಡ್ರು, ಯಲ್ಲಪ್ಪ ರತ್ನಮ್ಮ ಆದಪ್ಪ ಬಿಮ್ ಬಾಯಿ, ದೂಡಾ ಸದಸ್ಯೆ ವಾಣಿ ಬಕ್ಕೇಶ್, ಸಂತೋಷ್ ಹೊಸ ಅಂಗಡಿ, ಎಸ್.ಎಸ್. ಬಿರಾದಾರ, ಶಾರದಾ ಶಿವಕುಮಾರ್, ಸಂತೋಷ್ ಕುಮಾರ್, ಜ್ಯೋತಿ ಕೊಟ್ರೇಶ್, ಕರೂರು ಷಣ್ಮುಖ, ಆನಂದ್ ಕುಮಾರ್, ಪ್ರೇಮ ರೇವಣ್ಣ, ಅಮರೇಶ್, ಜ್ಯೋತಿ ಕಾಂತರಾಜ್, ಮಲ್ಲಪ್ಪ ಬೇವಿನಹಳ್ಳಿ ಭಾಗವಹಿಸಲಿದ್ದಾರೆ.

# ಭಿನ್ನಮತಕ್ಕೆ ತೆರೆ

**(1ನೇ ಪುಟದಿಂದ)** ಮಾಡಿದ್ದಾರೆಂಬ ಬಗ್ಗೆ ಖಚಿತ ಮಾಹಿತಿ ದೊರೆತಿಲ್ಲ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ವಿಜಯೇಂದ್ರ ಅವರು, ಕೇಂದ್ರ ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಹಾಗೂ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಈ ಬೆಳವಣಿಗೆ ಆಗಿದೆ.

ರಾಜ್ಯಾಧ್ಯಕ್ಷರಾಗಿ ನೀವು ಎಲ್ಲರನ್ನೂ ವಿಶ್ವಾಸದಿಂದ ಕೊಂಡೊಯ್ದು ಪಕ್ಷವನ್ನು ಸಂಘಟಿಸುವಂತೆ ವಿಜಯೇಂದ್ರ ಅವರಿಗೆ ವರಿಷ್ಠರು ಕಿವಿಮಾತು ಹೇಳಿದ್ದಾರೆ.

ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳುವ ಮುನ್ನ ರಾಜ್ಯ ಉಸ್ತುವಾರಿ ಅವರ ಮಾರ್ಗದರ್ಶನ ಪಡೆದುಕೊಳ್ಳಬೇಕು, ಅಲ್ಲದೆ, ಮುಖಂಡರ ಜೊತೆ ನಿರಂತರ ಸಂಪರ್ಕ ಇಟ್ಟುಕೊಳ್ಳಿ, ಏಕಪಕ್ಷೀಯವಾಗಿ ನಿರ್ಧಾರಗಳನ್ನು ಕೈಗೊಳ್ಳಬೇಡಿ ಎಂದು ಸಲಹೆ ಮಾಡಿದ್ದಾರೆ.

ವರಿಷ್ಠರ ಸಲಹೆಯನ್ನು ಸ್ವೀಕರಿಸಿರುವ ವಿಜಯೇಂದ್ರ, ತಕ್ಷಣವೇ ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷರ ಬದಲಾವಣೆಗೂ ಸಮ್ಮತಿಸಿದರೆಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಪಕ್ಷದ ವರಿಷ್ಠರ ಈ ನಿರ್ಧಾರದಿಂದ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕೆಂಬ ಪ್ರಯತ್ನ ದಲ್ಲಿದ್ದ ಭಿನ್ನರಿಗೆ ಮುಖಭಂಗವಾಗಿದೆ.

ವಿಜಯೇಂದ್ರ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ ಇಲ್ಲವೇ ಮುರುಗೇಶ್ ನಿರಾಣಿಯನ್ನು ತರಲು ಭಿನ್ನರು ಮತ್ತು ತಟಸ್ಥ ಗುಂಪು ದೆಹಲಿಯಲ್ಲಿ ಲಾಭಿ ನಡೆಸಿತ್ತು. ಆದರೆ, ಅವರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಘಟಕ ವಿಷಯ ಹೊರತುಪಡಿಸಿ ಯಾವುದೇ ಲಾಭವಾಗಿಲ್ಲ. ತಬಂಡಾಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ಜಾರಿಯಾಗಿದ್ದು, ಅವರು ನೀಡುವ ಉತ್ತರದ ಮೇಲೆ ಮುಂದಿನ ಕ್ರಮ ಅವಲಂಬಿಸಿದೆ.

# ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದ ತರಳಬಾಳು ಶ್ರೀಗಳ ಪಿಟೀಲು ವಾದನ



ಭರಮಸಾಗರ, ಫೆ.11- ಸಂಗೀತ, ನೃತ್ಯ, ಯೋಗವನ್ನು ಶಾಲಾ ಶಿಕ್ಷಣ ಕಡ್ಡಾಯಗೊಳಿಸ ಬೇಕು. ಇವುಗಳಿಂದ ವಿದ್ಯಾರ್ಥಿಗಳಲ್ಲಿ ಸೂಕ್ಷ್ಮ ಸಂವೇದನೆ, ಏಕಾಗ್ರತೆ, ಅಧ್ಯಯನದಲ್ಲಿ ತಲ್ಲೀನತೆಗೆ ಕಾರಣವಾಗುತ್ತದೆ. ಕಲೆಯನ್ನು ಕೇವಲ ಮನರಂಜನೆಗಾಗಿ ಸೀಮಿತಗೊಳಿಸ ಬಾರದು. ಕಲೆ ಸಂಸ್ಕಾರ ವಂತರನ್ನಾಗಿ ಮಾಡಿ ಮನೋವಿಕಾಸಕ್ಕೆ ದಾರಿಮಾಡಿಕೊಡುತ್ತದೆ.

ಸಾಹಿತ್ಯಕ್ಕೆ ಸಂಗೀತ ಸೇರಿದರೆ ಹಾಲುಜೇನು ಸೇರಿದಂತಾಗುತ್ತದೆ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ನುಡಿದರು.

ತರಳಬಾಳು ಹುಣ್ಣಿಮೆಯ ಆರನೇ ದಿನದ ಪ್ರತಿಭಾನ್ವೇಷಣೆ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.

ತಮ್ಮ ಬಾಲ್ಯದ ಸಂಗೀತ ಕಲಿಕೆಯ ದಿನಗಳನ್ನು ನೆನಪಿಸಿಕೊಂಡ ಶ್ರೀಗಳು, ಹಿರಿಯ ಗುರುಗಳ ಆಶೀರ್ವಾದ ಮತ್ತು ಮಾರ್ಗದರ್ಶನದಿಂದ ಸಂಗೀತ ಅಭ್ಯಾಸ ಮಾಡಲು ಸಾಧ್ಯವಾಯಿತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ಓದುವಾಗ ಬಿಡಾರಂ ಕೃಷ್ಣಪ್ಪನವರು ಪ್ರಾರಂಭಿಸಿದ ಸಂಗೀತ ಶಾಲೆಯಲ್ಲಿ ವೆಂಕಟಾಚಲ ಎಂಬ ವಿದ್ವಾಂಸರ ಬಳಿ ಅಭ್ಯಾಸ ಮಾಡಿದೆವು. ಆಗ ತ್ಯಾಗರಾಜರ ಪಂಚರತ್ನ ಕೃತಿಗಳನ್ನು ಲೀಲಾಜಾಲವಾಗಿ ನುಡಿಸುತ್ತಿದ್ದೆವು.

ಮುಂದೆ ಬನಾರಸ್ಸಿನಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳಿದಾಗ ಅಲ್ಲಿಯೂ ಅಭ್ಯಾಸ ಮುಂದುವರಿಸಿ, ವಯೋಲಿನ್ ಡಿಪ್ಲೋಮಾದಲ್ಲಿ ರ್‍ಯಾಂಕ್ ಪಡೆದದ್ದನ್ನು ಶ್ರೀಗಳು ಸ್ಮರಿಸಿಕೊಂಡರು. ಬನರಾಸಿನಲ್ಲಿ ಚಂದ್ರಶೇಖರ ಎಂಬುವವರದು ಸಂಪೂರ್ಣ ಭರತ ನಾಟ್ಯ ಕಲಾವಿದರ ಕುಟುಂಬವಾಗಿತ್ತು. ಆಗಾಗ ಅವರ ಭರತನಾಟ್ಯಕ್ಕೆ ವಸಂತ ರಾಗದಲ್ಲಿ ಪಿಟೀಲನ್ನು ಪಕ್ಕ ವಾದ್ಯವಾಗಿ ನುಡಿಸುವ ಅವಕಾಶ ದೊರಕುತ್ತಿತ್ತು.

ವಿಯೆನ್ನಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದ ದಿನಗಳಲ್ಲಿ ಅಪೆರಾ ಹೌಸ್ ನಲ್ಲಿ ಭಾರತೀಯ ಸಂಗೀತ ಕಚೇರಿ ಏರ್ಪಡಿಸಲಾಗಿತ್ತು. ಆಗ ಪಿಟೀಲು ವಿದ್ವಾಂಸರು ತಾಂತ್ರಿಕ ಕಾರಣಗಳಿಗಾಗಿ ಸಕಾಲದಲ್ಲಿ ಹಾಜರಾಗಲು ಕಷ್ಟ ಸಾಧ್ಯವಾಗಿತ್ತು. ಆ ಸಂದರ್ಭದಲ್ಲಿ ಸಂಘಟಕರಿಗೆ ನಮ್ಮ ಬಗ್ಗೆ ಮಾಹಿತಿ ದೊರೆತು, ನಮ್ಮನ್ನು ಆಹ್ವಾನಿಸಿದಾಗ ಸಂಗೀತ ಕಚೇರಿಯಲ್ಲಿ ಪಿಟೀಲು ನುಡಿಸಲು ಸಾಧ್ಯವಾಗಿತ್ತು. ಆದರೆ ನಂತರ ಮಠದ ಜವಾಬ್ದಾರಿ ವಹಿಸಿಕೊಂಡ ಮೇಲೆ ಅಭ್ಯಾಸ ಮಾಡಲು ಸಮಯವೇ ಸಿಗದಂತಾಯಿತು. ಕಲೆ ಬಾಲ್ಯಸಂಸ್ಕಾರದಿಂದ ಹೃದ್ಗತವಾಗಿದ್ದರ ಫಲವಾಗಿ ಆಗಾಗ ಪಿಟೀಲು ನುಡಿಸಲು ಸಾಧ್ಯವಾಗುತ್ತಿದೆ. ಮಲಯಾಚಲ ಪರ್ವತ ಶ್ರೇಣಿಯಲ್ಲಿ ಯಥೇಚ್ಛವಾಗಿ ಶ್ರೀಗಂಧದ ಮರಗಳು ಬೆಳೆದಿವೆ. ಅಲ್ಲಿ ವಾಸಿಸುವ ಮಹಿಳೆಯರು ಶ್ರೀಗಂಧದ ಮರದ ತುಂಡುಗಳನ್ನು ಅಡುಗೆ ಮಾಡಲು ಉರುವಲಾಗಿ ಬಳಸುತ್ತಾರೆ. ಶ್ರೀಗಂಧದ ಮಹತ್ವದ ಅರಿವೇ ಅವರಿಗಿಲ್ಲ ಎಂಬ ಮಾತನ್ನು ಸೂಚ್ಯವಾಗಿ ತಿಳಿಸಿದರು.

ಸಮಾರಂಭದಲ್ಲಿ ಕರ್ನಾಟಕ ಸಂಗೀತ 17ನೇ ಮೇಳಕರ್ತ ರಾಗವಾದ ವಸಂತ ರಾಗ, ರೂಪಕ ತಾಳದಲ್ಲಿ ಮೊದಲು ನುಡಿಸಿದರು. ತ್ಯಾಗರಾಜರ ಜಗನ್ಮೋಹನ ರಾಗದ ಕೃತಿಗೆ ಹಾಗೂ ಕೊನೆಯಲ್ಲಿ ಜಿ ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು ಅಂದು' ಭಾವಗೀತೆಯನ್ನು ನುಡಿಸಿದರು.

ಕಚೇರಿಯಲ್ಲಿ ಪ್ರಸಿದ್ಧ ಹಾಡುಗಾರ ಶಶಿಧರ ಕೋಟೆ ಪೂಜ್ಯರ ತಾಳ ಹಾಕುತ್ತಿದ್ದರು. ಕೀಬೋರ್ಡ್ ಅನ್ನು ವಿದ್ವಾನ್ ಶಿವಾನಂದ ಜೋಯಿಸ್, ಮೆಂಡೋಲಿನ್ ವಾದನವನ್ನು ವಿದ್ವಾನ್ ಎಲ್ ಎಸ್ ಕಾರ್ತಿಕ್ ಮತ್ತು ಮೃದಂಗ ವಾದ್ಯವನ್ನು ವಿದ್ವಾನ್ ಶ್ರೀವತ್ಸ ನುಡಿಸಿದರು. ಇದೇ ಸಂದರ್ಭದಲ್ಲಿ ಗದಗಿನ ವೀರೇಶ್ವರ ಪುಣ್ಯಾಶ್ರಮದ ಪಂಡಿತ್ ನಾರಾಯಣ ಹಿರೇಕೊಳಚಿಯವರು ಪಿಟೀಲು ನುಡಿಸಿದರು.

# ತರಳಬಾಳು ಹುಣ್ಣಿಮೆ ಮಾನವ ಕುಲದ ಅಭ್ಯುದಯ





12ನೇ ಶತಮಾನದ ಬಸವಣ್ಣನವರ ಸಮಕಾಲೀನರಾದ ವಿಶ್ವಬಂಧು ಮರುಳಸಿದ್ಧರು ತನ್ನ ಶಿಷ್ಯನಾದ ತೆಲುಗುಬಾಳು ಸಿದ್ಧರಿಗೆ ಮಸ್ತಕದ ಮೇಲೆ ಹಸ್ತವನ್ನಿಟ್ಟು ಮಾಘ ಶುದ್ಧ ಹುಣ್ಣಿಮೆ ದಿನದಂದು ಶ್ರೀ ಮದುಜ್ಜಯಿನಿ ಸದ್ಧರ್ಮ ಪೀಠದಲ್ಲಿ ಕೂರಿಸಿ ತರಳ ಬಾಳು ಎಂದು ಹರಸಿ ಆಶೀರ್ವದಿಸಿದ ದಿನದಿಂದ ಶ್ರೀ ತರಳಬಾಳು ಬೃಹನ್ಮಠ ಪ್ರಾರಂಭವಾಗಿ ಇಲ್ಲಿಯವರೆಗೆ 20 ಜಗದ್ಗುರುಗಳು ಪೀಠವನ್ನಲಂಕರಿಸಿ ಶ್ರೀ ತರಳಬಾಳು ಬೃಹನ್ಮಠವನ್ನು ಯಶಸ್ವಿಯಾಗಿ ಮುನ್ನಡೆಸುತ್ತಾ ಬಂದಿರುವುದು ವೇದ್ಯವಾದ ಸಂಗತಿಯಾಗಿದೆ. ತರಳ ಬಾಳು ಎಂಬ ಮಂತ್ರದಲ್ಲಿ ಮಾನವ ಕುಲದ ಅಭ್ಯುದಯವೇ ಅಡಕವಾಗಿದೆ.

ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠವು ಸುಮಾರು 100ಕ್ಕೂ ಹೆಚ್ಚು ಪ್ರೌಢಶಾಲೆಗಳನ್ನು ಗ್ರಾಮೀಣ ಮಟ್ಟದಲ್ಲಿ ಸ್ಥಾಪಿಸಿ ಮಹಿಳೆಯರಿಗೆ ಆದ್ಯತೆ ನೀಡಿದೆ. ಇದರ ಜೊತೆಗೆ ಹಲವಾರು ಪಿಯು ಕಾಲೇಜುಗಳು, ಪದವಿ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಡಿ.ಎಡ್., ಬಿಇಡಿ ಮುಂತಾದ ಕಾಲೇಜುಗಳನ್ನು ನಾಡಿನಾದ್ಯಂತ ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನ ದಾಸೋಹ ಹಾಗೂ ಜ್ಞಾನ ದಾಸೋಹ ಮಾಡುತ್ತಾ ಬಂದಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಇದಲ್ಲದೇ ಸಂಸ್ಕೃತ ಪಾಠಶಾಲೆ, ವೃದ್ಧಾಶ್ರಮಗಳನ್ನು ತೆರೆದು ಜಾತಿ-ಧರ್ಮ ಭೇದಭಾವವಿಲ್ಲದೇ ಸೇವೆಗೈಯ್ಯುತ್ತಿರುವುದು ಮೆಚ್ಚುವ ಸಂಗತಿಯಾಗಿದೆ. ಇದೆಲ್ಲದರ ನಿಜವಾದ ರೂವಾರಿಯೆಂದರೆ 20ನೇ ಜಗದ್ಗುರುಗಳಾದ ಲಿಂಗೈಕ್ಯ ಪರಮ ಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಹಾಗೆ ಇವರು ಮರಣವೇ ಮಹಾನವಮಿ, ಶರಣಸತಿ ಲಿಂಗಪತಿ ನಾಟಕದ ಕರ್ತೃಗಳಾಗಿ ನಾಡಿನ ಜನ ಮಾನಸದಲ್ಲಿ ಈ ನಾಟಕಗಳ ಮೂಲಕ ಪ್ರಭಾವ ಬೀರಿರುತ್ತಾರೆ.

ನಂತರ 21ನೇ ಜಗದ್ಗುರುಗಳಾಗಿ 1979ರಲ್ಲಿ ಸಿರಿಗೆರೆ ಶ್ರೀ ತರಳಬಾಳು ಪೀಠಕ್ಕೆ ಪೀಠಾಧ್ಯಕ್ಷರಾಗಿ ಬಂದವರು ನಮ್ಮ ಇಂದಿನ ಶ್ರೀಗಳಾದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು. ಪೂಜ್ಯರು ಅಧಿಕಾರಕ್ಕೆ ಬಂದನಂತರ ಶಿಕ್ಷಣ ಸಂಸ್ಥೆಗಳ ಸುಧಾರಣೆ, ಕಟ್ಟಡಗಳ ಅಭಿವೃದ್ಧಿಗಳಿಗೆ ಹೊಸ ಸ್ಪರ್ಶ ನೀಡಿರುವುದಲ್ಲದೇ ಮಠದಲ್ಲಿ ಸಮಾಜದ ಸರ್ವ ಭಕ್ತರಿಗೆ ನ್ಯಾಯಧನ ವ್ಯವಸ್ಥೆ ತಂದು ಪ್ರತಿ ಸೋಮವಾರ ಸಾವಿರಾರು ಕುಟುಂಬಗಳಿಂದ ಬಂದಂಹ ವ್ಯಾಜ್ಯಗಳನ್ನು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ತೀರ್ಮಾನಿಸಿ, ನ್ಯಾಯದಾನ ಮಾಡಿರುವುದು ಮಾನವೀಯತೆ ದ್ಯೋತಕವಾಗಿದೆ. ಭಕ್ತರು ವ್ಯಾಜ್ಯಗಳನ್ನು ಮಾಡಿಕೊಂಡು ಕೋರ್ಟ್ ಕಛೇರಿಗಳಿಗೆ ಅಲೆಯುವುದರಿಂದ ಹಣ ವ್ಯಯ, ಸಮಯ ವ್ಯಯ, ದ್ವೇಷ, ಅಸೂಯೆಗಳಿಗೆ ಸಿಲುಕಿ ಹಾಳಾಗುವುದನ್ನು ತಪ್ಪಿಸಿದ ಕೀರ್ತಿ ಶ್ರೀಮಠಕ್ಕೆ ಸಲ್ಲುತ್ತದೆ.

ಡಾ. ಶಿವಮೂರ್ತಿ ಶಿವಾಚಾರ್ಯರು ಪಾಣಿನಿಯ ಸಂಸ್ಕೃತ ವ್ಯಾಕರಣ ಗ್ರಂಥವಾದ ಅಷ್ಟಾಧ್ಯಾಯವನ್ನು ಅನ್ಯ ಭಾಷೆಗಳಿಗೆ ಭಾಷಾಂತರಿಸಿ ಗಣಕ ಯಂತ್ರಕ್ಕೆ ಅಳವಡಿಸಿರುವುದು ಶ್ಲಾಘನೀಯ. ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಹೆಬ್ಬಯಕೆಯಂತೆ 12ನೇ ಶತಮಾನದ ಶರಣರ ವಚನಗಳನ್ನು ಅನ್ಯ ಭಾಷೆಗಳಿಗೆ ತರ್ಜುಮೆ ಮಾಡಿ ವಿಶ್ವ ಸಮುದಾಯದ ಮನದಾಳಕ್ಕೆ ತಲುಪಿಸಿದ ಮಹಾನ್ ಕೀರ್ತಿಗೆ ಇಂದಿನ ಡಾ. ಶ್ರೀ ಶಿವಮೂರ್ತಿ ಸ್ವಾಮೀಜಿಯವರು ಭಾಜನರಾಗಿದ್ದಾರೆ. ರೈತರ ಹಿತದೃಷ್ಟಿಯಿಂದ ತರಳಬಾಳು ಕೃಷಿ ಕೇಂದ್ರದ ಮೂಲಕ ಹಲವಾರು ಆಧುನಿಕ ಕೃಷಿ ಮಾಹಿತಿಗಳು ರೈತರಿಗೆ ಸಿಗುವಂತೆ ಮಾಡಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.



ಗ್ರಾಮೀಣ ರೈತರ ಸಂಕಷ್ಟಗಳನ್ನು ತಲಸ್ಪರ್ಶಿಯಾಗಿ ಅರ್ಥ ಮಾಡಿಕೊಂಡ ಶ್ರೀಗಳು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಕಾರಣ ರೈತ ನಮ್ಮ ರಾಷ್ಟ್ರದ ಬೆನ್ನೆಲುಬು ಮತ್ತು ಸಕಲ ಜೀವರಾಶಿಗಳಿಗೆ ಅನ್ನ ಕೊಡುವ ರೈತ ಕುಗ್ಗಬಾರದು. ಅವನ ಬದುಕು ಮೂರಾಬಟ್ಟೆಯಾಗಬಾರದು ಎಂಬ ಘನ ಉದ್ದೇಶದಿಂದ ತರಳಬಾಳು ಹುಣ್ಣಿಮೆ ನಡೆದ ಕಡೆಯೆಲ್ಲಾ ರೈತರ ಬದುಕಿಗೆ ಆಸರೆಯಾದ ಕೆರೆಗಳಿಗೆ ನೀರು ತುಂಬಿಸುವ ಅವರ ಯೋಜನೆ ದೂರ ದೃಷ್ಟಿಯುಳ್ಳದ್ದಾಗಿದೆ.

ಈ ಹಿನ್ನೆಲೆಯಲ್ಲಿ ಮೊದಲ ಪ್ರಯೋಗವಾಗಿ ತುಂಗಭದ್ರಾ ನದಿಯಿಂದ ಚನ್ನಗಿರಿ ತಾಲ್ಲೂಕಿನ ಉಬ್ರಾಣಿ ಏತ ನೀರಾವರಿ ಯೋಜನೆ, ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಹಾಗೆ ದಾವಣಗೆರೆ ಭಾಗದ 22 ಕೆರೆಗಳಿಗೆ ಏತ ನೀರಾವರಿ ಸೌಲಭ್ಯ ನೀಡಿವಲ್ಲಿ ಪೂಜ್ಯರು ಯಶಸ್ವಿಯಾಗಿದ್ದಾರೆ.

ನಂತರ ಜಗಳೂರಿನಲ್ಲಿ 2018ರಲ್ಲಿ ನಡೆದ ತರಳಬಾಳು ಹುಣ್ಣಿಮೆ ಫಲಶೃತಿಯಾಗಿ ಜಗಳೂರು ತಾಲ್ಲೂಕಿನ 57 ಕೆರೆ ತುಂಬಿಸುವ ಏತ ನೀರಾವರಿ ಯೋಜನೆ, ಹಾಗೆಯೇ ಭರಮಸಾಗರ ಹೋಬಳಿಯ 42 ಕೆರೆ ತುಂಬಿಸುವ ಭರಮಸಾಗರ ಏತ ನೀರಾವರಿ ಯೋಜನೆ (ರಾಜೇನಹಳ್ಳಿ ಬಳಿ ತುಂಗಭದ್ರಾ ನದಿಯಿಂದ) ಜಾರಿಗೊಳಿಸಲು ಆಯಾ ಭಾಗದ ಜನರ ಹೋರಾಟ ಮತ್ತು ಒತ್ತಾಸೆಯನ್ನು ಮನಗಂಡು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು ಆಯಾ ಕಾಲದ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು, ಹೆಚ್.ಡಿ. ಕುಮಾರಸ್ವಾಮಿ ಮತ್ತು ಬಿ.ಎಸ್. ಯಡಿಯೂರಪ್ಪನವರ ಸರ್ಕಾರಗಳ ಮನವೊಲಿಸಿ 1250 ಕೋಟಿ ರೂ.ಗಳ ಅನುದಾನ ಬಿಡುಗಡೆಗೊಳಿಸಿ, ಆ ಕೆರೆಗಳಿಗೆ ನೀರು ತುಂಬಿಸಿ ಬಾಗಿನ ಅರ್ಪಿಸಿ, ರೈತರ ಮನದಲ್ಲಿ ಆಶಾಕಿರಣ ಅಷ್ಟೇ ಅಲ್ಲ, ಆಧುನಿಕ ಭಗೀರಥರೆಂದು ಕರೆಯಿಸಿಕೊಂಡಿರುವುದು ನಿಜವಾಗಲೂ ಮೆಚ್ಚುವ ಸಂಗತಿಯಾಗಿದೆ.

ಜಗಳೂರು ತಾ. ಕೆರೆಗಳು ಮತ್ತು ಭರಮಸಾಗರ ಹೋಬಳಿ ಕೆರೆ ತುಂಬಿಸುವುದರ ಫಲಶೃತಿಯಾಗಿ ಭರಮಸಾಗರದಲ್ಲಿ ತರಳಬಾಳು ಹುಣ್ಣಿಮೆ ನಡೆಯುತ್ತಿದೆ. ಈ ಹುಣ್ಣಿಮೆ ಒಂದು ರೀತಿಯ ಸಂಚಾರಿ ಗ್ರಂಥ ಭಂಡಾರವಿದ್ದಂತೆ. ಈ ಬಾರಿ ದೇಶ ದವಿದೇಶಗಳಿಂದ ಭಕ್ತರನ್ನು ಸೆಳೆಯುತ್ತಿದೆ.

ಹೆಚ್ಚಿನ ಜನ ಸಾಗರವೇ ಹರಿದು (5ನೇ ಪುಟಕ್ಕೆ)

# ಮಾನವೀಯತೆಯ ಅನನ್ಯತೆ ಸಾರುವ ಮಹಾ ಉತ್ಸವ ತರಳಬಾಳು ಹುಣ್ಣಿಮೆ



- ಡಾ. ಅನಿತಾ ಹೆಚ್ ದೊಡ್ಡ ಗೌಡರ್, ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ.

ಧರ್ಮ, ಜಾತಿ, ಮತ, ಪಂಥಗಳನ್ನು ಮೀರಿ ಸರ್ವ ಉನ್ನತಿಯ ಆಶಯವನ್ನು ಹೊತ್ತು ಶರಣರ ತತ್ವ ವಿಚಾರಗಳ ಮಂಥನದ ಮಹಾ ವೇದಿಕೆ ತರಳಬಾಳು ಹುಣ್ಣಿಮೆ ಮಹೋತ್ಸವ. ಇದೊಂದು ಕೇವಲ ಉತ್ಸವ ವಾಗದೆ ನೆಲ, ಜಲ, ಧರ್ಮ, ಸಾಹಿತ್ಯ, ಕಲೆ, ಸಾಂಸ್ಕೃತಿಕ ಸಂಸ್ಕಾರಗಳ ಸಂಗಮವಾಗಿದೆ. ನೊಂದವರ ಬೆಂದವರ ಆಶಾಕಿರಣವಾಗಿದೆ.

ಶ್ರೀ ತರಳಬಾಳು ಜಗದ್ಗುರು ಬೃಹನ್ ಮಠವು ಕಳೆದ 75 ವರ್ಷಗಳಿಂದ ನಾಡಿನಾದ್ಯಂತ ನಡೆಸಿಕೊಂಡು ಬಂದಿರುವ ವಾರ್ಷಿಕ ಸಮಾರಂಭ ಇದಾಗಿದೆ. ಎಲ್ಲ ಜನರ ಆದರ, ಅಭಿಮಾನ ಪ್ರೀತಿ ಗಳಿಸಿರುವ ಮಹೋತ್ಸವ ನಾಡ ಹಬ್ಬವಾಗಿದೆ. ಸಂಕುಚಿತ ಬುದ್ಧಿಯ ಮೂಲಭೂತವಾದಿಗಳು ಕೋಲಾಹಲ ದಿಂದಾಗಿ ಬೇರೆ ಬೇರೆ ಧರ್ಮ ಮತ ಜಾತಿಗಳ ಮಧ್ಯೆ ಸಂಶಯ ಅಸೂಯೆ ದ್ವೇಷಗಳ ಅಡ್ಡ ಗೋಡೆಗಳು ನಿರ್ಮಾಣವಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲರನ್ನೂ ಸದ್ಧರ್ಮದ ಸಂಕೋಲೆಯಲ್ಲಿ ಒಂದು ಮಾಡಿರುವ ಇದೊಂದು ಭಾವೈಕ್ಯತಾ ಸಂಗಮ, ನಮ್ಮ ತರಳುಬಾಳು ಹುಣ್ಣಿಮೆ ಮಹೋತ್ಸವ. ಎಲ್ಲರಿಗೂ ಈ ಮಹಾವೇದಿಕೆ ಒಂದು ಆಶಾ ಭಾವನೆ ಮೂಡಿಸುವ ಸೂರ್ಯಕಿರಣವಾಗಿದೆ.

12ನೇ ಶತಮಾನದ ಬಸವಾದಿ ಶಿವಶರಣರ ಹಿರಿಯ ಸಮಕಾಲೀನರು ವಿಶ್ವ ಬಂದು ಮರುಳ ಸಿದ್ದರು.

ಅಂದಿನ ಸಮಾಜವನ್ನು ಪಟ್ಟ ಭದ್ರ ಹಿತಾಸಕ್ತಿಗಳ ಶೋಷಣೆಗಳ ಕಬಂಧ ಬಾಹುಗಳಿಂದ ರಕ್ಷಿಸಲು ಜೀವನ ಪರ್ಯಂತ ಹೋರಾಡಿದವರು. ಧರ್ಮದ ತಳಹದಿಯ ಮೇಲೆ ಮನುಷ್ಯ ಮನುಷ್ಯರ ನಡುವೆ ತಾರತಮ್ಯ ಬೇಡವೆಂದು ಹೊಸ ಸಮಾಜವನ್ನು ನಿರ್ಮಿಸಿ ಸದ್ಧರ್ಮ ಪೀಠ ಸ್ಥಾಪಿಸಿದ ಕೀರ್ತಿ ವಿಶ್ವ ಬಂಧು ಮರುಳಸಿದ್ದ ಇವರದು.


**ನಮ್ಮ ವಾಹನದಲ್ಲಿ ಪೆಟ್ರೋಲ್ ಖಾಲಿಯಾದರೆ, ನಿಂತುಬಿಡುತ್ತದೆ.**
**ಹಾಗೆಯೇ ನಮ್ಮಲ್ಲಿ ನೈತಿಕತೆ, ಮಾನವೀಯ ಮೌಲ್ಯಗಳು ಕಡಿಮೆಯಾದರೆ**
**ನಮ್ಮ ಸಾಧನೆಯ ಪಯಣ ಸಂಸ್ಕಾರವಂತ ಬದುಕು ನಿಂತುಬಿಡುತ್ತದೆ.**
**ಹೇಗೆ ಪೆಟ್ರೋಲ್ ಖಾಲಿಯಾದಾಗ ಪೆಟ್ರೋಲ್ ಬಂಕ್‌ಗಳಿಗೆ ತೆರಳುತ್ತೇವೆ.**
**ಹಾಗೆಯೇ ನಮ್ಮ ಸಂಸ್ಕಾರದ ಬದುಕಿಗೆ ಬೇಕಾದ ಶರಣರ ತತ್ವ ಬೇಕಾದಾಗ**
**ತರಳಬಾಳು ಹುಣ್ಣಿಮೆಯಂತಹ ಮಹೋತ್ಸವಗಳಿಗೆ ನಾವುಗಳು ತೆರಳಬೇಕಾಗುತ್ತದೆ.**
**ಇದರಲ್ಲಿ ಉತ್ಪ್ರೇಕ್ಷೆಯ ಮಾತಿಲ್ಲ.**
**ಈ ಮಹೋತ್ಸವದಲ್ಲಿ ಯಾರಿಗೂ ಊಟ ತಿಂಡಿ ನೀರು ಯಾವುದನ್ನು ಕೊಡದಿದ್ದರೂ**
**ಬರೀ ಜ್ಞಾನದ ಅರ್ಜನೆಗಾಗಿ ಪ್ರತಿ ವರ್ಷ ಲಕ್ಷಾಂತರ ಬಂಧುಗಳು ಭಕ್ತರು ನಾಡಿನ**
**ವಿವಿಧ ಮೂಲೆಗಳಿಂದ ಆಗಮಿಸುತ್ತಿರುವುದೇ ಇದಕ್ಕೆ ಸಾಕ್ಷಿ.**

ಮಾಘ ಶುದ್ಧ ಪೂರ್ಣಿಮೆ ಯಂದು ತಮ್ಮ ಶಿಷ್ಯ ತೆಲುಗು ಬಾಳು ಸಿದ್ದನನ್ನು ಸದ್ಧರ್ಮ ಪೀಠದಲ್ಲಿ ಕುಳ್ಳಿರಿಸಿ ತರಳಾ ಬಾಳು ಎಂದು ಹರಸಿ ಆಶೀರ್ವದಿಸಿದರು. ತರಳಬಾಳು ಎಂಬ ಪಂಚಾಕ್ಷರಿ ಮಂತ್ರದಲ್ಲಿ ಇಡೀ ಮಾನವ ಕುಲದ ಅಭ್ಯುದಯವೇ ಅಡಕವಾಗಿದೆ. ಈ ಆಶೀರ್ವಾದದ ಪರಂಪರೆಯಲ್ಲಿ ಸಾಗಿ ಬಂದ ಸದ್ಧರ್ಮ ಪೀಠಾಧಿಪತಿಗಳೇ ತರಳಬಾಳು ಜಗದ್ಗುರುಗಳು ಎಂದು ಹೆಸರಾಗಿದ್ದಾರೆ. ಈ ಐತಿಹಾಸಿಕ ಘಟನೆಯು ಜರುಗಿದ ಹುಣ್ಣಿಮೆಯು ನಾಡಿನಲ್ಲಿ ತರಳಬಾಳು ಹುಣ್ಣಿಮೆ ಎಂದು ಪ್ರಸಿದ್ಧವಾಗಿದೆ.

ಒಂದು ಮಠದ ಚಾರಿತ್ರಿಕ ಹಿನ್ನೆಲೆಯಲ್ಲಿ ನಡೆದುಕೊಂಡು ಬಂದಿರುವ ಈ ಹುಣ್ಣಿಮೆ ಮಹೋತ್ಸವವನ್ನು ಜಾತಿ, ಮತ ಪಂಥಗಳ ಚೌಕಟ್ಟನ್ನು ಮೀರಿ ನಾಡ ಜನರ ಭಾವೈಕ್ಯತೆಯ ಸಾಧನವನ್ನಾಗಿಸಿದ ಕೀರ್ತಿ 20ನೆಯ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮೀಜಿಯವರಿಗೆ ಸಲ್ಲುತ್ತದೆ.

ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿ ವರ್ಷ ನಾಡಿನ ಪ್ರಮುಖ ಧಾರ್ಮಿಕ ಸಮಾರಂಭಗಳಿಗೆ ಮಾತೃ ಸ್ವರೂಪದಂತಿರುವ ಶ್ರೀ ತರಳಬಾಳು ಹುಣ್ಣಿಮೆ ಮಹೋತ್ಸವವು ಲಿಂಗೈಕ್ಯ ಗುರುಗಳವರ ಕರ ಕಮಲ ಸಂಜಾತರಾದ ಶ್ರೀ ತರಳಬಾಳು ಜಗದ್ಗುರು ಶ್ರೀ ಸಾವಿರದ ನೂರ ಎಂಟು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಮಾರ್ಗ ದರ್ಶನದಲ್ಲಿ ಹೊಸ ಆಯಾಮ ಪಡೆದು ವಿಶ್ವಬಂಧು ಮರಳು ಸಿದ್ದರ ತರಳಬಾಳು ಮೂಲ ಮಂತ್ರದ ಆಶೀರ್ವಾದ ಆಶಯದಂತೆ ಈ ವರ್ಷ ದಾವಣಗೆರೆ ಮತ್ತು ಚಿತ್ರದುರ್ಗದ ಮಧ್ಯ ಭಾಗದಲ್ಲಿರುವ (5ನೇ ಪುಟಕ್ಕೆ)

# ಬಹುತ್ವದ ನಾಡಿನಲ್ಲಿ ಬಂಧುತ್ವ ಸಾರುವ ಹುಣ್ಣಿಮೆ



- ಕೊಂಡಜ್ಜಿ ಬಣಕಾರ್ ಶಿವಕುಮಾರ, ವಕೀಲರು, ದಾವಣಗೆರೆ. 9980184766

ಭಾರತ ದೇಶ ವಿವಿಧ ರೀತಿಯ ಹಲವು ಧರ್ಮಗಳ, ಕೋಮುಗಳ, ಜಾತಿಗಳ, ವರ್ಗಗಳ, ಲಿಂಗಗಳ, ಪರಂಪರೆಗಳ, ಸಂಸ್ಕೃತಿಗಳ, ರೂಢಿ - ಸಂಪ್ರದಾಯಗಳ, ಜೀವನ ಪದ್ಧತಿಗಳ, ನೀತಿ - ನಿಯಮಗಳ, ಕಟ್ಟುಪಾಡುಗಳ, ನಂಬಿಕೆಗಳ, ಬಣ್ಣಗಳ, ಭಾಷೆಗಳ, ವೇಷ - ಭೂಷಣಗಳ, ವಿವಿಧ ಜಾತಿಯ ಗಿಡ - ಮರಗಳ, ಪ್ರಾಣಿ - ಪಕ್ಷಿಗಳ, ಮಣ್ಣುಗಳುಳ್ಳ ಬಹುತ್ವದ ತವರೂರು. ಇಂತಹ ಬಹುತ್ವದ ಭಾರತದಲ್ಲಿ ಅಸಂಖ್ಯಾತ ಋಷಿ ಮುನಿಗಳು, ಧರ್ಮ ದರ್ಶಕರು ಜನ್ಮ ತಾಳಿದ್ದರೂ ಸಹ ಈ ನೆಲದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಅಲ್ಲೋಲ-ಕಲ್ಲೋಲ ದುರ್ಘಟನೆಗಳು ನಡೆಯುತ್ತಾ ಅರಾಜಕತೆ, ಅಶಿಸ್ತು, ಅಶಾಂತಿ, ಧರ್ಮ -ಧರ್ಮಗಳ ನಡುವೆ ಸಂಘರ್ಷ, ಜಾತಿ -ಜನಾಂಗೀಯ ಸಂಘರ್ಷ, ಕೋಮು ಗಲಭೆ, ರಕ್ತಪಾತ, ಕೊಲೆ -ಸುಲಿಗೆ, ಪೈಶಾಚಿಕತೆ ತಲೆ ಎತ್ತಿ ನಿಂತು ತಾಂಡವಾಡುತ್ತಲಿವೆ. ಪ್ರತೀ ಕ್ಷಣಕ್ಕೂ ವಿಸ್ಮಯಕಾರಿ ಘಟನೆಗಳು ಉದ್ಭವಿಸಿ ಜನಮನವನ್ನು, ಮನುಕುಲವನ್ನು ತಲ್ಲಣಕ್ಕೆ, ಉದ್ವೇಗಕ್ಕೆ ಎಡೆಮಾಡಿಕೊಡುತ್ತಲಿವೆ.

ಇಂದಿನ ಈ ಘಟನೆಗಳನ್ನು ನೋಡಿ ರಾಷ್ಟ್ರದ ಸ್ವಾತಂತ್ರ್ಯ, ಸಮಾನತೆ, ಜಾತ್ಯತೀತತೆ, ಧರ್ಮಾತೀತತೆ ಮತ್ತು ಶಾಂತಿ-ಸಹಬಾಳ್ವೆಗಾಗಿ ಹಗಲಿರಳೂ ಶ್ರಮಿಸಿ ತಮ್ಮ ಪ್ರಾಣವನ್ನೇ ಬಲಿತೆತ್ತ ಮಹಾನ್ ತ್ಯಾಗ ಜೀವಿಗಳ ಆತ್ಮಗಳು ಕಣ್ಣೀರು ಹಾಕುವಂತಾಗಿವೆ.

ಭವಿಷ್ಯ ಕತ್ತಲಮಯವಾಗತೊಡಗಿದೆ ಜಗದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಲಿವೆ. ಇದಕ್ಕೆ ಅಂತ್ಯವೆಂದು? ಎಂದು ಪ್ರಜ್ಞಾವಂತ ಪ್ರಜೆಗಳೆಲ್ಲರೂ ಗಾಢವಾಗಿ ಆಲೋಚನೆ ಮಾಡಬೇಕಾದ ಕವಲುದಾರಿಯಲ್ಲಿದ್ದಾರೆ.

ಮಣ್ಣು ಪಾಲಾಗುತ್ತಿರುವ ಬಂಧುತ್ವವನ್ನು, ಭಾವೈಕ್ಯತೆ ಯನ್ನು, ಸೌಹಾರ್ದತೆಯನ್ನು ಪುನಃ ಸ್ಥಾಪಿಸುವ, ಜ್ಞಾನ, ಬೆಳಕು, ಅನುಭಾವಗಳ ದಾಸೋಹಗಳನ್ನು ಉಣಬಡಿಸಿ ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವಂತೆ, ಪ್ರೀತಿಸು ವಂತೆ, ಸಹಿಸುವಂತೆ ಮಾಡುವ, ಅಗಣಿತ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡು ಕೊಂಡು ಬದುಕು ಸಾರ್ಥಕ ಮಾಡಿಕೊಳ್ಳುವ ಅಪರೂಪದ ಕಾರ್ಯಕ್ರಮ ವೆಂದರೆ ಸಿರಿಗೆರೆ ಮಠದವರು ಪ್ರತೀ ವರ್ಷ ಆಚರಿಸುತ್ತಾ ಬಂದಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'.

ಶ್ರೀ ವಿಶ್ವಬಂಧು ಮರುಳಸಿದ್ದರು ಏಕಾಂಗಿಯಾಗಿ ಸಮಾಜದಲ್ಲಿ ನೆಲೆಯೂರಿದ್ದ ಸಾಮಾಜಿಕ ಅನಿಷ್ಟ ಪದ್ಧತಿ ವಿರುದ್ಧ ಪವಾಡ ಪುರುಷನಂತೆ ಎದ್ದು ಬಂದು ಜೀವಪರ ತತ್ವಗಳ ಆಚರಣೆಗಾಗಿ, ಸಮ ಸಮಾಜದ ನಿರ್ಮಾಣಕ್ಕಾಗಿ ಸಾಕಷ್ಟು ಹೋರಾಟ ಮಾಡಿ ಸಮಾಜವನ್ನು ಜಾಗೃತಗೊಳಿಸಿದರು.ಇಂತಹ ಒಬ್ಬ ಸಾಮಾಜಿಕ, ಧಾರ್ಮಿಕ ಹೋರಾಟಗಾರನಾದ ಶ್ರೀ ವಿಶ್ವ ಬಂಧು ಮರುಳಸಿದ್ದರೇ ಸಿರಿಗೆರೆಯ ಶ್ರೀ ತರಳಬಾಳು ಮದ್ದುಜ್ಜಯಿನಿ ಸದ್ದರ್ಮ ಪೀಠಕ್ಕೆ ಮೂಲ ಪುರುಷರು.

ಹೀಗೆ ಜೀವಪರ ಹೋರಾಟ ನಡೆಸುತ್ತಾ ಬಂದ ಶ್ರೀ ವಿಶ್ವಬಂಧು ಮರುಳಸಿದ್ದರು ತನ್ನ ನಂತರದಲ್ಲೂ ತಮ್ಮ ತತ್ವ -ಸಿದ್ಧಾಂತಗಳು, ವಿಚಾರಗಳು, ಚಿಂತನೆಗಳು ಆಚರಣೆಗಳೊಂದಿಗೆ ತನ್ನ ಶಿಷ್ಯ ತೆಲುಗುಬಾಳು ಸಿದ್ದೇಶ್ವರರನ್ನು ಉಜ್ಜಯಿನಿಯ ಸದ್ಧರ್ಮ ಪೀಠಕ್ಕೆ ಕೂರಿಸಿ ಮನುಕುಲದ ಅಭ್ಯುದಯವೇ ಅಡಗಿರುವ 'ತರಳಾ ಬಾಳು ' ಎಂಬ ಪಂಚಾಕ್ಷರಿ ಮಂತ್ರದೊಂದಿಗೆ ಹರಸಿ- ಆಶೀರ್ವದಿಸಿದ ದಿನವಾದ ಮಾಘ ಶುದ್ಧ ಹುಣ್ಣಿಮೆಯೇ ಮುಂದೊಂದು ದಿನ 'ತರಳಬಾಳು ಹುಣ್ಣಿಮೆ' ಯಾಗಿ ಪ್ರಸಿದ್ಧಿಗೆ ಬಂದಿತು.

ಶ್ರೀ ವಿಶ್ವಬಂಧು ಮರುಳಸಿದ್ದನ ಆಶೀರ್ವಾದದಿಂದ ಪ್ರಾರಂಭವಾದ ಶ್ರೀ ತರಳಬಾಳು ಗುರು ಪರಂಪರೆಯ 20 ನೆಯ ಜಗದ್ಗುರುಗಳಾದ ಲಿಂಗೈಕ್ಯ ಶ್ರೀ ಶಿವಕುಮಾರ ಶಿ ವಾ ಚಾ ರ್ಯ (5ನೇ ಪುಟಕ್ಕೆ)

# ಇಂದು ತರಳಬಾಳು ಜಗದ್ಗುರುಗಳ ಸದ್ಧರ್ಮ ಸಿಂಹಾಸನಾರೋಹಣ

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು ಸಂಜೆ 6.30 ಕ್ಕೆ 'ಧರ್ಮ, ವಿಜ್ಞಾನ, ಸಮಾಜ' ಕುರಿತ ಒಂಭತ್ತನೇ ದಿನದ (ಸಮಾರೋಪ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಸದ್ಧರ್ಮ ಸಿಂಹಾಸನಾರೋಹಣ ಕೂಡ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಸಂಸದ ಡಾ.ಜಿ.ಎಂ. ಸಿದ್ದೇಶ್ವರ್,ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಆಗಮಿಸಲಿದ್ದಾರೆ.


(ಸಂಗ್ರಹ ಚಿತ್ರ)

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರೂ, ಇಸ್ರೋ ವಿಜ್ಞಾನಿಗಳಾದ ಡಾ. ಬಿ.ಎನ್. ಸುರೇಶ್, ಖ್ಯಾತ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಸುವರ್ಣ ನ್ಯೂಸ್ ನ ಅಜಿತ್ ಹನುಮಕ್ಕನವರ್, ಸಾಹಿತಿ ಮೈಸೂರಿನ ಡಾ. ಹೆಚ್.ಎಸ್. ಹರಿಶಂಕರ್, ಬೆಂಗಳೂರು ವಿಭ ಅಕಾಡೆಮಿಯ ಸಂಸ್ಕೃತ ಮತ್ತು ಇಂಡಾಲಜಿ ವಿದ್ಯಾಂಸರಾದ ಬಿ.ವಿ. ಆರತಿ, ರಷ್ಯಾದ ಸಂಶೋಧನಾ ವಿದ್ಯಾರ್ಥಿ ರಲಿನ ಕೊಪೆಲಿಯೋವಿಚ್ ಉಪನ್ಯಾಸ ನೀಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಪದ್ಮಶ್ರೀ ವಾರಣಾಸಿ ಬೆಟಿನಾ ಬಾಯ್ಕರ್, ಸ್ವಿಟ್ಜರ್‌ಲ್ಯಾಂಡ್ ನಿವೃತ್ತ ಭೌತವಿಜ್ಞಾನಿ ಡಾ. ಖಬರ್ ಮುನಿರ್, ಬೆಂಗಳೂರು ಭಾರತೀಯ ವಿಶ್ವಬ್ಯಾಂಕ್, ಸೌರಶಕ್ತಿ ಘಟಕದ ನಿವೃತ್ತ ಮುಖ್ಯಸ್ಥ ಮೋಹ್ವಾ ಮುಖರ್ಜಿ, ಮುಂಬೈನ ಸೀನಿಯರ್ ಕಮಾಂಡರ್ ಏರ್ ಇಂಡಿಯಾ ಕ್ಯಾಪ್ಟನ್ ಶಿಖಾ ಹರ್ನೆ ಭಾಗವಹಿಸಲಿದ್ದಾರೆ.

ಶಾಸಕರಾದ ಡಿ.ಜಿ.ಶಾಂತನಗೌಡ, ಯು. ಬಿ.ಬಣಕಾರ್, ಬಸವರಾಜ ಶಿವಗಂಗಾ, ವಿಯೆನ್ನಾ ಭಾರತೀಯ ರಾಯಭಾರಿ ಕಚೇರಿ ಮಾಜಿ ಅಧಿಕಾರಿ ಆಸೀಮ್‌ನಾಥ್ ಮುಖರ್ಜಿ ಗೌರವ ಉಪಸ್ಥಿತಿ ವಹಿಸುವರು. ಬೆಳಿಗ್ಗೆ 10 ಗಂಟೆಗೆ ಕುಸ್ತಿ ಪಂದ್ಯದ ನಂತರ ಮಧ್ಯಾಹ್ನ 2.30 ರಿಂದ 5.30 ರವರೆಗೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಬೆಳ್ಳಿ ಪಲ್ಲಕ್ಕಿ ಉತ್ಸವ ಜರುಗಲಿದೆ.

ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ತೋಟಪ್ಪ ಉತ್ತಂಗಿ ಮತ್ತು ಕೋಕಿಲ ರುದ್ರಮೂರ್ತಿ ಸಂಗಡಿಗರಿಂದ ವಚನ ಗೀತೆ, ಸಿರಿಗೆರೆ ತರಳಬಾಳು ಕಲಾ ಸಂಘದ ಕಲಾವಿದರಿಂದ ಮಲ್ಲಕಂಬ ಪ್ರದರ್ಶನ, ಸಿರಿಗೆರೆ ತರಳಬಾಳು ಕಲಾ ಸಂಘದಿಂದ ಶರಣ ಸಂಕುಲ- ವಿಶ್ವಬಂಧು ಮರುಳಸಿದ್ಧ ನೃತ್ಯ ರೂಪಕ ಹಾಗೂ ಭರತನಾಟ್ಯ ಪ್ರದರ್ಶನ ನಡೆಯಲಿದೆ.


## RECRUITMENT OF VOCATIONAL TRAINERS IN GOVT. SCHOOLS

mosaic

**Mosaic Workskills Private Limited, a NSDC-empanelled Training Partner, invites the applications for the position of Vocational Trainers for Beauty/Apparel sector in various govt. schools of KARNATAKA under CSS- VSHSE PROGRAMME.**

**Location:**
Bagalkot, Belgaum Chikkodi, Chitraduga, Davangere, Mysore, Raichur, Chikkamagalore, Shimoga, Tumkur, Dakshina Kannada and other major districts of Karnataka.

**Pre-Requisite:**
1. The candidate should be a domicile of Karnataka.
2. Age Limit: 22-45 Years (As on Jan. 01, 2025). Age relaxation will be provided as per Government rules.

| | |
|---|---|
| **Beauty and Wellness Sector** | Eligibility: PG/Degree/Diploma/B. Voc in in Beauty therapy/ Beauty culture/ Cosmetology from a recognized Institute /University with at least 60% marks with at least 1 year of work/teaching experience. |
| **Apparel Madeups and Home Furnishing Sector** | Experience: PG/Degree/Diploma/B.Voc in Fashion & Textile Design (min. 60%) with 2 years of work/teaching experience **OR:** DOEACC "B Level" Certificate with 1 year of work/teaching experience Desirable: Knowledge of Biometric System. |

**Minimum Competency:**
1. Effective communication skills (oral and written), Basic skills computing, Technical competencies, Soft skills, Facilitation skills.
2. Desirable: Certified Trainer from SSC in this job role.

**Application Procedure:**
1. Job Application through filling out Google form.
2. Last date of recieving application is (14 Feb 2025) till 6:30 PM. Application recieved post the deadline will not be considered.
3. Trainers and coordinators will be shortlisted on academic and technical qualifications.
4. Written test for the technical/domain specific knowledge related to the sector.
5. Shortlisted candidates will attend a virtual interview to assess their knowledge, interests, and aptitude.
6. The selection process will include a review and practical demo teaching test.
7. All communication for job application to be done through emails.
8. Management reserves the right to accept or reject any application without providing a reason.
9. This selection process is strictly based on merit.

**All-Inclusive Salary payable per month per trainer (ranges between Rs 20,000/- to 30,000/-) as per Samagra Siksha Karnataka guidelines.**

***Interested/Eligible Candidates can apply through the Google form link: https://forms.gle/JfoAxaQ9Qd9Ctc3Q7***

**Or**
**Scan this QR Code**
**Or**
**Email to: vtpmosaickt@gmail.com or Call us 0731 4022441, 0731 2524043**

**MOSAIC WORKSKILLS PVT. LTD.**

*Mosaic maintains a fair, ethical hiring process & does not charge any fees for hiring or joining.




Scanned with OKEN Sca

# ಬಹುತ್ವದ ನಾಡಿನಲ್ಲಿ ಬಂಧುತ್ವ ಸಾರುವ ಮಹೋತ್ಸವ

(3ನೇ ಪುಟದಿಂದ) ಮಹಾಸ್ವಾಮೀಜಿಯವರು ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಪ್ರತೀ ವರ್ಷ ಮಾಘ ಶುದ್ಧ ಸಪ್ತಮಿಯಿಂದ ಮಾಘ ಶುದ್ಧ ಹುಣ್ಣಿಮೆಯವರೆಗಿನ 9 ದಿನಗಳವರೆಗೆ ಆಚರಿಸಲು ನಿರ್ಣಯಿಸಿ, ಅಂದಿನಿಂದ ಶ್ರೀ ಮಠ ಸಿರಿಗೆರೆಯಲ್ಲಿಯೇ ಸುಮಾರು 5-6 ವರ್ಷಗಳವರೆಗೆ ಸರಳವಾಗಿ ಆಚರಿಸುತ್ತಾ ಬಂದರು.

ಮೊಟ್ಟಮೊದಲ ಬಾರಿಗೆ ಬಹಿರಂಗವಾಗಿ 1950 ರಲ್ಲಿ ಜಗಳೂರಿನಲ್ಲಿ ಮೊದಲ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಆಚರಣೆ ಮಾಡಿದಂದಿನಿಂದ ಇಂದಿನವರೆಗೂ ನಾಡಿನ ಅನೇಕ ಭಾಗಗಳಲ್ಲಿ ಉದಾತ್ತ ಧ್ಯೇಯೋದ್ದೇಶಗಳೊಂದಿಗೆ ಅತ್ಯಂತ ಆದರ್ಶಮಯವಾಗಿ ಆಚರಿಸುತ್ತಾ ಬಂದಿರುವ ತರಳಬಾಳು ಹುಣ್ಣಿಮೆ ಮಹೋತ್ಸವ ಜನಮಾನಸದಲ್ಲಿ ಅಚ್ಚಳಿಯದೆ ಮನೆಮಾಡಿದೆ.

ಶ್ರೀ ಪೀಠದ ಮೂಲ ಪುರುಷ ಶ್ರೀ ವಿಶ್ವಬಂಧು ಮರುಳಸಿದ್ಧರಂತಹ ಮಹಾನ್ ಸಾಧಕರ ಆಶೀರ್ವಾಣಿ 'ತರಳಾ ಬಾಳು' ಎಂಬ ಮೂಲ ಮಂತ್ರವನ್ನು ತನ್ನ ಆದರ್ಶವಾಗಿಟ್ಟುಕೊಂಡು ಲೋಕದ ಎಲ್ಲಾ ತರಳರ ಬಾಳನ್ನು ಹಸನು ಮಾಡುವಲ್ಲಿ ಶ್ರಮಿಸುತ್ತಾ ಬಂದಿದೆ. ಮೇಲು -ಕೀಳು ತಾರತಮ್ಯಗಳ ನಿವಾರಣೆಗಾಗಿ ಭಕ್ತರ ಮನೆಗಳೆಲ್ಲಾ ಮಠಗಳಯ್ಯಾ ಎಂಬ ಬಸವ ವಾಣಿಯಂತೆ 'ದ್ವೇಷ -ವೈಷಮ್ಯಗಳ ಗೋಡೆಯನ್ನು ಕೆಡವೋಣ, ಪ್ರೀತಿ ವಿಶ್ವಾಸಗಳ ಸೇತುವೆಯನ್ನು ಕಟ್ಟೋಣ' ಎಂಬ ಧ್ಯೇಯವನ್ನೊಂದಿರುವ ತರಳಬಾಳು ಹುಣ್ಣಿಮೆ ಮಹೋತ್ಸವವು ರಾಷ್ಟ್ರೀಯ ಭಾವೈಕ್ಯತಾ ಪರಿಷತ್ತಾಗಿ ರೂಪುಗೊಂಡಿದೆ ಎಂದರೆ ತಪ್ಪಾಗಲಾರದು.

ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಸುಮಾರು 900 ವರ್ಷಗಳಿಂದ ಅಖಂಡವಾಗಿ ಪ್ರಜ್ವಲಿಸುತ್ತಾ ಬಂದ ಬಸವ ಜ್ಯೋತಿಗೆ ಅನಾಚಾರಿ ಅನುಯಾಯಿಗಳಿಂದ ಹಿಡಿದ ಮಂಕನ್ನು ತಿದ್ದಿ ತೀಡಿ ಆ ಜ್ಯೋತಿಯನ್ನು ಮತ್ತೆ ಉಜ್ವಲವಾಗಿ ಬೆಳಗುವಂತೆ ಮಾಡುವುದು, ಮಾನವರೆಲ್ಲರೂ ದೇವರ ಮಕ್ಕಳು. ಅವರೆಲ್ಲರಿಗೂ ದೇವರನ್ನು ಪೂಜಿಸುವ ಹಕ್ಕಿದೆ.

ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು,

ಹಾಲಿನಲ್ಲಿ ತುಪ್ಪವುಂಟು, ಆಂತರ್ಯದಲ್ಲಿ ಶಿವನಿಹನು ಎಂಬುದನ್ನು ತೋರಿಸಿಕೊಟ್ಟ, ಭಕ್ತಿಭಾವಗಳ ಸಂಗಮವಾಗುವ ತರಳಬಾಳು ಹುಣ್ಣಿಮೆ ಮಹೋತ್ಸವವು ಒಂದು ಜ್ಞಾನ ಜ್ಯೋತಿಯಾಗಿದೆ. ಹಾಗಾಗಿಯೇ ಅಲ್ಲಮ ಪ್ರಭುದೇವರು ತಮ್ಮ ಒಂದು ವಚನದಲ್ಲಿ,

**'ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ**
**ಕಾಮಿನಿ ನಿನ್ನವಳಲ್ಲ!**
**ನಿನ್ನ ಒಡವೆ ಎಂಬುದು ಜ್ಞಾನ ರತ್ನ ಮಾತ್ರ**
**ಅಂತಪ್ಪ ರತ್ನವ ನೀನು**
**ಅಲಂಕರಿಸಿದೆಯಾದಡೆ ನಮ್ಮ ಗುಹೇಶ್ವರಲಿಂಗದಲ್ಲಿ**
**ನಿನ್ನಿಂದ ಬಿಟ್ಟು ಸಿರಿವಂತರಿಲ್ಲ.'ಎಂದು ಹೇಳಿದ್ದಾರೆ.**

ಯಾವುದೇ ಭೇದ -ಭಾವ, ಮೇಲು -ಕೀಳು ತಾರತಮ್ಯಗಳಿಲ್ಲದೆ ಎಲ್ಲರನ್ನೂ ಒಟ್ಟುಗೂಡಿಸಿ ಭಾವನಾತ್ಮಕವಾಗಿ ಬೆಸೆಯುವ, ಈ ಬಹುತ್ವದ ನಾಡಿನಲ್ಲಿ ಬಂಧುತ್ವ ಸಾರುವ, ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೆ, ಏಕವ್ಯಕ್ತಿಯ ಪ್ರದರ್ಶನವಿಲ್ಲದೆ ಭಕ್ತರಿಂದ ಭಕ್ತರಿಗಾಗಿ ಭಕ್ತರಿಗೋಸ್ಕರ ನಡೆಯುವ ಏಕೈಕ ಮಹೋತ್ಸವವೇ ತರಳಬಾಳು ಹುಣ್ಣಿಮೆ ಮಹೋತ್ಸವ.

ಹೀಗೆ 9 ದಿನಗಳವರೆಗೆ ನಡೆಯುವ ವೈಶಿಷ್ಟ್ಯಪೂರ್ಣ, ವೈವಿಧ್ಯಮಯ, ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮವಾದ ತರಳಬಾಳು ಹುಣ್ಣಿಮೆ ಮಹೋತ್ಸವ ಒಂದು ಯಾಂತ್ರಿಕ ಕಾರ್ಯಕ್ರಮವಾಗದೇ ಅದೊಂದು ಉತ್ಸಾಹದ, ಪ್ರೋತ್ಸಾಹದ ಟಾನಿಕ್ ಆಗಿ, ಜನತೆಯ ಆಶೋತ್ತರಗಳ ಪ್ರತೀಕವಾಗಿ ನಾಡಿನ ನಾನಾ ಮೂಲೆಗಳಲ್ಲಿ ಸಡಗರ - ಸಂಭ್ರಮಗಳಿಂದ ಪ್ರತೀ ವರ್ಷ ಆಚರಿಸುತ್ತಾ ಬಂದಿರುವ ತರಳಬಾಳು ಹುಣ್ಣಿಮೆ ಮಹೋತ್ಸವವು ರಾಷ್ಟ್ರ ಕವಿ ಕುವೆಂಪುರವರ ವಾಣಿಯಂತೆ :

**'ನೂರು ಮತದ ಹೊಟ್ಟ ತೂರಿ**
**ಎಲ್ಲ ತತ್ವದೆಲ್ಲೆ ಮೀರಿ**
**ನಿರ್ದಿಗಂತವಾಗಿ ಏರಿ**
**ಓ ನನ್ನ ಚೇತನ ಆಗು ನೀ ಅನಿಕೇತನ'** ಎಂಬ ವಿಶ್ವ ಮಾನವ ಸಂದೇಶವನ್ನು ಸರ್ವ ಧರ್ಮ ಸಮನ್ವಯ ಸಂದೇಶವನ್ನು ಸಾರುತ್ತಾ ಬಂದಿದ್ದು, ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಬಿತ್ತರಿಸುವ ದಿವ್ಯ ಸಂದೇಶಗಳು ಬರಲಿರುವ ಹೊಸ ಶತಮಾನಕ್ಕೆ, ಹೊಸ ಸಹಸ್ರಮಾನಕ್ಕೆ ಮಂಗಳರಕ್ಷೆ ಯಾಗಿರಲಿ ಎಂದು ಆಶಿಸೋಣ.....

# ಸಂಸತ್‌ನಲ್ಲಿ ಜೆ.ಹೆಚ್. ಪಟೇಲ್ ಭಾವಚಿತ್ರ ಅನಾವರಣ ಮಾಡಲು ಒತ್ತಾಯ

ದಾವಣಗೆರೆ, ಫೆ.11- ಮಾಜಿ ಮುಖ್ಯಮಂತ್ರಿ ಜೆ.ಎಚ್ ಪಟೇಲ್ ಅವರ ಭಾವಚಿತ್ರವನ್ನು ಲೋಕಸಭೆಯಲ್ಲಿ ಅನಾವರಣ ಮಾಡುವ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಕಬ್ಬು ನಿಯಂತ್ರಣ ಮಂಡಳಿ ನಾಮ ನಿರ್ದೇಶಿತ ಸದಸ್ಯರೂ ಆದ ರೈತ ಮುಖಂಡ ತೇಜಸ್ವಿ ಪಟೇಲ್ ಮನವಿ ಮಾಡಿದ್ದಾರೆ. ಈ ಸಂಬಂಧ ಅವರು ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.



ಜಾತಿ, ಧರ್ಮ, ಪಕ್ಷಪಾತ ಮಾಡದ ಮಾಜಿ ಜೆ.ಎಚ್ ಪಟೇಲ್ ಅವರ ಅಪಾರ ಅಭಿಮಾನಿಗಳು ಈಗಲೂ ಸ್ಮರಿಸುತ್ತಾರೆ. ಆದರೆ ಪಟೇಲರು ಮತ ತರುವಂತಹ ನಾಯಕತ್ವ ಆಗಿರದ ಕಾರಣ, ಅವರ ನಂತರದ ಸರ್ಕಾರಗಳು ಅವರನ್ನು ಗೌರವಪೂರ್ವಕವಾಗಿ ನೆನಪಿಸಿಕೊಳ್ಳುವಂತಹ ಕೆಲಸ ಮಾಡದಿರುವುದು ಬೇಸರದ ಸಂಗತಿ ಆಗಿದೆ.

1967ರಲ್ಲಿ ಶಿವಮೊಗ್ಗ ಲೋಕಸ ಭಾ ಕ್ಷೇತ್ರದ ಪ್ರಥಮ ಕಾಂಗ್ರೆಸ್ಸೇತರ ಸಂಸದರಾಗಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ಆಯ್ಕೆಯಾಗಿ ಕನ್ನಡದಲ್ಲಿಯೇ ಮಾತನಾಡಿದ್ದರ ಪ್ರಯುಕ್ತ ಕನ್ನಡ ಸೇರಿದಂತೆ ದೇಶದ ಎಲ್ಲ ಭಾಷೆಗಳು ಸಂಸತ್ತಿನಲ್ಲಿ ಮಾತನಾಡಲು ಅವಕಾಶವಾಯಿತು. ಮುಖ್ಯಮಂತ್ರಿಗಳಾಗಿಯೂ ಜನಪರ ಕಾರ್ಯಗಳನ್ನು ಅವರು ಮಾಡಿದ್ದಾರೆ. ಹಾಗಾಗಿ ಪಟೇಲರ ಭಾವಚಿತ್ರವನ್ನು ಲೋಕಸಭೆಯಲ್ಲಿ ಅನಾವರಣ ಮಾಡುವ ಮೂಲಕ ಗೌರವ ಸಲ್ಲಿಸಬೇಕು ಎಂದು ತೇಜಸ್ವಿ ಪಟೇಲ್ ಹೇಳಿದ್ದಾರೆ.

# ನೂತನ ಕೈಗಾರಿಕಾ ನೀತಿ

(1ನೇ ಪುಟದಿಂದ) ಗುರಿಯನ್ನು ತಲುಪಲು ಜಿಲ್ಲೆಗಳನ್ನು 3 ವಲಯಗಳಾಗಿ ವಿಭಜಿಸಲಾಗುವುದು. ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಹೂಡಿಕೆಗೆ ಉತ್ತೇಜನ ನೀಡಲಾಗುವುದು ಎಂದರು.

ಕೈಗಾರಿಕೆಯಲ್ಲಿ ಹಿಂದುಳಿದ ವಲಯಗಳನ್ನು ಮೊದಲನೇ ಹಾಗೂ ಎರಡನೇ ವಲಯ ಎಂದು ಗುರುತಿಸಲಾಗುವುದು. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳು ಮೂರನೇ ವಲಯದಲ್ಲಿ ಬರಲಿವೆ. ಇಲ್ಲಿ ವಿಭಿನ್ನ ರೀತಿಯ ಉತ್ತೇಜನಗಳನ್ನು ಕಲ್ಪಿಸಲಾಗುವುದು ಎಂದು ಪಾಟೀಲ್ ತಿಳಿಸಿದರು.

## ಏಕಗವಾಕ್ಷಿ ಹೂಡಿಕೆ ವ್ಯವಸ್ಥೆಗೆ ಚಾಲನೆ

(1ನೇ ಪುಟದಿಂದ) ಹೇಳಿದ್ದಾರೆ.

ಈ ಕ್ರಮವು ಉತ್ಪಾದನಾ ವಲಯಕ್ಕೆ ವಿಶೇಷವಾಗಿ ಅನುಕೂಲಕರವಾಗಿದೆ. ಪ್ರಮಾಣ ಪತ್ರ ಆಧಾರಿತ ಅನುಮೋದನೆ ವ್ಯವಸ್ಥೆಯನ್ನು ಕರ್ನಾಟಕ ಉದ್ಯೋಗ ಮಿತ್ರ ಮೂಲಕ ಜಾರಿಗೆ ತರಲಾಗಿದೆ. ಇದರಿಂದಾಗಿ ಹೂಡಿಕೆದಾರರು ಹಲವಾರು ಅನುಮತಿಗಳಿಗಾಗಿ ಕಾಯದೇ ತಮ್ಮ ನಿರ್ಮಾಣ ಹಾಗೂ ಸಿದ್ಧತೆ ಚಟುವಟಿಕೆಗಳನ್ನು ಆರಂಭಿಸಬಹುದು ಎಂದು ಸಿದ್ದರಾಮಯ್ಯ ತಿಳಿಸಿದರು.

ನೂತನ ಏಕಗವಾಕ್ಷಿ ವ್ಯವಸ್ಥೆಯನ್ನು ರಾಷ್ಟ್ರೀಯ ಏಕಗವಾಕ್ಷಿ ವ್ಯವಸ್ಥೆಯ ಜೊತೆ ಜೋಡಣೆ ಮಾಡಲಾಗಿದೆ. ಇದರಿಂದಾಗಿ ಕೇಂದ್ರ ಹಂತದಲ್ಲೂ ಸೇವೆಗಳು ಸುಗಮವಾಗಿ ದೊರೆಯಲಿವೆ ಎಂದವರು ಹೇಳಿದರು.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ನಿಗಮದ ಸೇವೆಗಳೂ ಸಹ ಏಕಗವಾಕ್ಷಿ ರೂಪದಲ್ಲಿ ಸಿಗಲಿವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಹೂಡಿಕೆದಾರರ ಪ್ರಶ್ನೆಗಳಿಗೆ ಉತ್ತರಿಸಲು ಎ.ಐ. ಆಧರಿತ ಬಹುಭಾಷಾ ಚಾಟ್ ಬಾಟ್ ರೂಪಿಸಲಾಗಿದೆ. ಹೂಡಿಕೆಗೆ ಅಗತ್ಯವಾದ ಅನುಮತಿ, ನಿರಾಕ್ಷೇಪಣಾ ಪತ್ರ ಇತ್ಯಾದಿಗಳ ವಿವರ ಪಡೆಯಲು ತಂತ್ರಾಂಶ ಒಂದನ್ನು ರೂಪಿಸಲಾಗಿದೆ. ಈ ಮೂಲಕ ಯೋಜನೆಗಳಿಗೆ ಲಭ್ಯವಿರುವ ವಿನಾಯಿತಿಗಳು ಇತ್ಯಾದಿ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದು ಎಂದವರು ಹೇಳಿದರು.

## ಶ್ರೀ ಬಿಸಲೇರಿ ಬಸಮ್ಮ ಭೀಮಪ್ಪ ಪ್ರೌಢಶಾಲೆ ಪುನರಾರಂಭ

ದಾವಣಗೆರೆ, ಫೆ.11- ಹೈಕೋರ್ಟ್ ಮಧ್ಯಂತರ ಆದೇಶದಂತೆ ಹಾಗೂ ಇಲಾಖೆ ಮುಂದಿನ ಆದೇಶದವರೆಗೆ ಕಾಡಜ್ಜಿ ಗ್ರಾಮದ ಶ್ರೀ ಬಿಸಲೇರಿ ಬಸಮ್ಮ ಭೀಮಪ್ಪ ಪ್ರೌಢಶಾಲೆಯನ್ನು ಇಂದಿನಿಂದ ಪುನರಾರಂಭಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

# ಅನನ್ಯತೆಯನ್ನು ಸಾರುವ ಮಹಾ ಉತ್ಸವ

(3ನೇ ಪುಟದಿಂದ) ಭರಮಸಾಗರ ಊರಿನಲ್ಲಿ ಅರ್ಥಪೂರ್ಣವಾಗಿ ನಡೆಯುತ್ತಲಿದ್ದು, ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ ಎಂಬ ತತ್ವದೊಂದಿಗೆ ಇವನಾರವ ಇವ ನಾರವ ಇವ ನಾರವನೆಂದ ಎನಿಸದಿರಯ್ಯ ಇವ ನಮ್ಮವ ಇವ ನಮ್ಮವನೆಂದೆಣಿಸಯ್ಯ ಕೂಡಲಸಂಗಮದೇವ ನಮ್ಮ ಮನೆಯ ಮಗನೆಂದೆನಿಸಯ್ಯ ಎಂಬ ವಚನದ ಸಾರದಂತೆ ಲಿಂಗಭೇದ, ವರ್ಣಭೇದ, ವರ್ಗಭೇದಗಳನ್ನು ಮೆಟ್ಟಿನಿಂತು ಎಲ್ಲರನ್ನೂ ಒಂದೇ ಎಂದು ಪರಿಗಣಿಸಿ ನಡೆಯುತ್ತಿದೆ. ಈ ಮಹೋನ್ನತ ತರಳುಬಾಳು ಹುಣ್ಣಿಮೆ ಮಹೋತ್ಸವ ಮಾನವ ಜನಾಂಗ ಇರುವವರೆಗೆ ನಿರಂತರವಾಗಿ ವಿಜೃಂಭಣೆಯಿಂದ ಜರುಗಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

# ಮಾನವ ಕುಲದ ಅಭ್ಯುದಯವೇ ಹುಣ್ಣಿಮೆ

(3ನೇ ಪುಟದಿಂದ) ಬರುವ ಸಾಧ್ಯತೆಯಿದೆ. ದೇಶದ ಜ್ವಲಂತ ಸಮಸ್ಯೆಗಳಾದ ರೈತರ ಕೃಷಿ ಸಮಸ್ಯೆ, ಆರೋಗ್ಯ, ಪರಿಸರ, ಸ್ತ್ರೀಹತ್ಯೆ-ಶೋಷಣೆ ಇಂತಹ ವಿಚಾರಗಳ ಜೊತೆ ಸಾಹಿತ್ಯಿಕ ವಿಚಾರ, ಸಾಂಸ್ಕೃತಿಕ ಸ್ಪರ್ಧಾ ಚಟುವಟಿಕೆಗಳು, ನಾಟಕಗಳು, ಸಂವಾದ ಗೋಷ್ಠಿಗಳು ನಡೆಯುವ ಸಾಧ್ಯತೆ ಇದೆ. ಹುಣ್ಣಿಮೆ ದಿನದಂದು (12.02.2025) ಬೆಳ್ಳಿ ಪಲ್ಲಕ್ಕಿ ಉತ್ಸವವಿರುತ್ತದೆ.

# ನಗರದಲ್ಲಿ ಬಿಎನ್‌ಐ ಪೃಥ್ವಿ ಚಾಪ್ಟರ್ ಸಭೆ

ದಾವಣಗೆರೆ, ಫೆ. 11 - ಬಿಎನ್‌ಐ ಪೃಥ್ವಿ ಚಾಪ್ಟರ್ ದಾವಣಗೆರೆ ಇದರ ಸಭೆಯು ಬಾಪುಜಿ ಬಿ-ಸ್ಕೂಲ್ಸ್ ಸಹಯೋಗದಲ್ಲಿ ಬಾಪೂಜಿ ಎಂಬಿಎ ಸಭಾಂಗಣದಲ್ಲಿ ಇಂದು ನಡೆಯಿತು. ವಿನಾಯಕ ಬಿ. ಮಲ್ಲನಗೌಡರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾಗಿ ಜಿ.ಕೆ. ರಘು ಹಾಗೂ ಕಾರ್ಯದರ್ಶಿ-ಖಜಾಂಚಿಯಾಗಿ ಬಿ. ಕಿರಣ್ ಕುಮಾರ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ನೇರ ನೆಟ್ವರ್ಕಿಂಗ್ ಮೂಲಕ ಯಶಸ್ವಿ ಬಿಎನ್‌ಐ ಸದಸ್ಯರ ಯಶೋಗಾಥೆಗಳನ್ನು ಹಂಚಿಕೊಳ್ಳಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬಾಪೂಜಿ ಬಿ-ಸ್ಕೂಲ್ಸ್ ನಿರ್ದೇಶಕ ಡಾ. ಎಚ್. ವಿ. ಸ್ವಾಮಿ ತ್ರಿಭುವಾನಂದ ಮಾತನಾಡಿ, ಗುಡ್ ಮಾರ್ನಿಂಗ್ ಅನ್ನು ಮರುಮರು ಹೇಳುವುದರಿಂದ ಪರಸ್ಪರ ಸಕಾರಾತ್ಮಕ ಶಕ್ತಿ ಉಂಟಾಗುತ್ತದೆ ಎಂಬುದರ ಬಗ್ಗೆ ಹಾಗೂ ಉದ್ಯಮಿಗಳಾಗುವ ಮಹತ್ವವನ್ನು ವಿವರಿಸಿದರು.

ಬಿಎನ್‌ಐ ಕಾರ್ಯನಿರ್ವಾಹಕ ನಿರ್ದೇಶಕ ರಮೇಶ್ ಹೆಗ್ಡೆ ಅವರು ಬಿಎನ್‌ಐ ಯ 40 ವರ್ಷಗಳ ಪ್ರಯಾಣದ ಬಗ್ಗೆ ವಿವರಿಸಿದರು.




# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಭರತ ಹುಣ್ಣಿಮೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭರತ ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ನಾಗರತ್ನಮ್ಮ ಮತ್ತು ಶಶಿಧರ್ ಮತ್ತು ಕುಟುಂಬದವರು ಸೇವಾ ಕರ್ತರಾಗಿ ದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್

# ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಭರತ ಹುಣ್ಣಿಮೆ, ಶಿವಾನುಭವ ಗೋಷ್ಠಿ



ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು 11.30ಕ್ಕೆ 288ನೇ ಭರತ ಹುಣ್ಣಿಮೆ, ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕಲ್ಲಯ್ಯಜ್ಜನವರು ವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಮನೂರು ಶಿವಶಂಕರಪ್ಪ, ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಎ.ಹೆಚ್. ಸಿದ್ಧಲಿಂಗಸ್ವಾಮಿ, ಎಸ್.ಕೆ. ವೀರಣ್ಣ, ಜೆ.ಎನ್. ಕರಿಬಸಪ್ಪ

# ಅಕ್ಕಮಹಾದೇವಿ ಸಮಾಜದಲ್ಲಿ ಇಂದು ಭರತ ಹುಣ್ಣಿಮೆ ಕಾರ್ಯಕ್ರಮ



ಅಕ್ಕಮಹಾದೇವಿ ಸಮಾಜದಲ್ಲಿ ಇಂದು ಸಂಜೆ 5.30 ಕ್ಕೆ ಭರತ ಹುಣ್ಣಿಮೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶ್ರೀಮತಿ ಕೆ. ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀಮತಿ ಮಂಜುಳಾ ಕಾಯಿ ಮಕರ ಸಂಕ್ರಾಂತಿ ಬಗ್ಗೆ ಮಾತನಾಡುವರು. ಶ್ರೀಮತಿ ಶಾಂತಾ ಯಾವಗಲ್ ವಚನ ಗಾಯನ ಹಾಡಲಿದ್ದಾರೆ. ಶ್ರೀಮತಿ ಆಶಾ ಚಿತ್ರಕಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಬಗ್ಗೆ ಮಾತನಾಡುವರು. ಉಮಾ ಎಮ್ಮಿ ಗಣರಾಜ್ಯೋತ್ಸವದ ಬಗ್ಗೆ ಮಾತನಾಡುವರು. ಶ್ರೀಮತಿ ನೀಲಗುಂದ ಜಯಮ್ಮ ನವರಿಂದ ಚಿಂತನ - ಮಂಥನ ನಡೆಯಲಿದೆ. ಶ್ರೀಮತಿ ದೊಗ್ಗಳ್ಳಿ ಸುವರ್ಣಮ್ಮ ಉಪಸ್ಥಿತರಿರುವರು ಎಂದು ಹುಣ್ಣಿಮೆ ಸಂಚಾಲಕರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಹಾಗೂ ಶ್ರೀಮತಿ ಸುಧಾ ಅಜ್ಜಂಪುರ ತಿಳಿಸಿದ್ದಾರೆ.

# ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ



ಯಲ್ಲಮ್ಮ ನಗರದ 4ನೇ ಮೇನ್, 4ನೇ ಕ್ರಾಸ್‌ನಲ್ಲಿನ ಶ್ರೀನ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನ ಸೇವಾ ಸಮಿತಿಯಿಂದ 25ನೇ ವರ್ಷದ ಬೆಳ್ಳಿ ಮಹೋತ್ಸವದ ಪ್ರಯುಕ್ತ ಇಂದು ಭಾರತ ಹುಣ್ಣಿಮೆ ಕಾರ್ಯಕ್ರಮವಿರುತ್ತದೆ.

ಪ್ರಾತಃಕಾಲ ಶ್ರೀ ಜಗನ್ಮಾತೆ ರೇಣುಕಾ ಯಲ್ಲಮ್ಮದೇವಿಗೆ ಸುಮಂಗಲಿಯವರಿಂದ ಗಂಗಾ ಜಲವನ್ನು ತರುವುದು.

ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಡೆಯುತ್ತದೆ. ನಂತರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಸಂಗಮದಲ್ಲಿ 45 ಕೋಟಿ ಯಾತ್ರಿಗಳಿಂದ ಪವಿತ್ರ ಸ್ನಾನ

ಮಹಾಕುಂಭ ನಗರ, ಫೆ. 11 - ಕುಂಭಮೇಳದ ಸಂಗಮದಲ್ಲಿ ಇದುವರೆಗೂ 45 ಕೋಟಿ ಜನರು ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.

ಮಹಾ ಕುಂಭಮೇಳ ಫೆಬ್ರವರಿ 26ರಂದು ಪೂರ್ಣಗೊಳ್ಳುವ ವೇಳೆಗೆ ಒಟ್ಟು 55 ಕೋಟಿ ಜನರು ಸಂಗಮ ಪ್ರದೇಶಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಸರ್ಕಾರ ತಿಳಿಸಿದೆ.

# ರಾಜ್ಯ ಹನ್ನೆರಡು ನೂತನ ಹೂಡಿಕೆ ವಲಯಗಳಾಗಿ ವಿಂಗಡಣೆ

ಬೆಂಗಳೂರು, ಫೆ. 12 - ಕರ್ನಾಟಕವನ್ನು 12 ಹೊಸ ಹೂಡಿಕೆ ವಲಯಗಳಾಗಿ ವಿಂಗಡಿಸಲಾಗುವುದು. ಕೈಗಾರಿಕೆಗಳಿಗೆ 30 ಸಾವಿರ ಎಕರೆ ಜಾಗ ಒದಗಿಸಲಾಗುವುದು ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮಾತನಾಡಿದ ಅವರು, ಈ ವಲಯಗಳಲ್ಲಿ ವಿಶ್ವ ದರ್ಜೆಯ ಮೂಲಭೂತ ಸೌಲಭ್ಯಗಳು ಇರಲಿವೆ. ಕೈಗಾರಿಕಾ ವಲಯಗಳಲ್ಲಿ ಶುದ್ಧ ನೀರು ಒದಗಿಸಲು 3,800 ಕೋಟಿ ರೂ. ಒದಗಿಸಲಾಗುವುದು ಎಂದು ಹೇಳಿದರು.

ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಜೊತೆಗೆ ದಕ್ಷತೆಗೆ ಉತ್ತೇಜನ ನೀಡುವುದು ಸರ್ಕಾರದ ನೀತಿಯಾಗಿದೆ. ಇದಕ್ಕಾಗಿ ಕ್ಲಸ್ಟರ್ ಆಧರಿತ ನೀತಿಯನ್ನು ಅಳವಡಿಸಿಕೊಳ್ಳಲಾಗುವುದು. ವೈಮಾನಿಕ ಹಾಗೂ ರಕ್ಷಣೆ, ಎಲೆಕ್ಟ್ರಿಕ್ ವಾಹನ ಉತ್ಪಾದನೆ, ಔಷಧ ಉತ್ಪಾದನೆ, ಡೀಪ್ ಟೆಕ್ ಹಾಗೂ ಡ್ರೋನ್ ಪಾರ್ಕ್‌ಗಳನ್ನು ರಾಜ್ಯಾದ್ಯಂತ ಸ್ಥಾಪಿಸಲಾಗುವುದು ಎಂದು ಪಾಟೀಲ್ ಹೇಳಿದರು. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈಗಾಗಲೇ 85 ಸಾವಿರಕ್ಕೂ ಹೆಚ್ಚು ಎಕರೆ ಜಮೀನನ್ನು ಕೈಗಾರಿಕೆಗಳಿಗೆ ಅಭಿವೃದ್ಧಿಪಡಿಸಿದೆ. ಇಲ್ಲಿ 25 ಸಾವಿರ ಕೈಗಾರಿಕೆಗಳು ಸ್ಥಾಪನೆಯಾಗಿವೆ ಎಂದವರು ತಿಳಿಸಿದರು.

# ಜಮ್ಮು ಸ್ಫೋಟ : ಕ್ಯಾಪ್ಟನ್ ಸೇರಿ ಇಬ್ಬರು ಸೈನಿಕರ ಸಾವು

ಜಮ್ಮು, ಫೆ. 12 - ಜಮ್ಮು ಮತ್ತು ಕಾಶ್ಮೀರದ ಅಖ್ನೂರ್ ವಲಯದ ನಿಯಂತ್ರಣ ರೇಖೆ ಬಳಿ ಉಗ್ರರು ಅಳವಡಿಸಿದ್ದ ಸುಧಾರಿತ ಸ್ಫೋಟಕ ಸಿಡಿದು ಕ್ಯಾಪ್ಟನ್ ಸೇರಿ ಇಬ್ಬರು ಸೈನಿಕರು ಸಾವನ್ನಪ್ಪಿದ್ದಾರೆ ಹಾಗೂ ಇನ್ನೊಬ್ಬ ಸೈನಿಕನಿಗೆ ಗಾಯಗಳಾಗಿವೆ.

ಕಳೆದ ನಾಲ್ಕು ದಿನಗಳಲ್ಲಿ ನಿಯಂತ್ರಣ ರೇಖೆ ಬಳಿ ಉಗ್ರರು ನಡೆಸುತ್ತಿರುವ ಮೂರನೇ ದಾಳಿ ಇದಾಗಿದೆ.

ಗಾಯಗೊಂಡ ಸೈನಿಕನನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


## AYURVEDIC MEDICAL COLLEGE & PG CENTER

**Ashwini Paramedical college**

#405/1, Ashwini Nagar, P.B Road Near Bathi lake, Davanagere.

M : 63612 75755 / 91648 88991

**WALK IN INTERVIEW**

| Sl. No. | Post | Qualification | No |
|---|---|---|---|
| 01 | Duty Doctor | MBBS | 1 |
| 02 | Duty Doctor | BAMS | 4 |
| 03 | Physiotherapist | D. PT / M.PT | 2 |
| 04 | Staff Nurse | ANM / | 5 |
| | | GNM | 5 |
| 05 | Pharmacist | D. Pharma / B. Pharma | 4 |
| 06 | Pharmacologist | Pharma D / M . Pharma | 1 |
| 07 | Pharmacologist | M . Pharma (Pharmacognosist) | 1 |
| 08 | Bio chemist | B.Sc / M.Sc Biochemistry | 1 |
| 09 | Lab. Technician | Lab. Technician course | 6 |
| 10 | X-ray Technician | X-ray Technician course | 1 |


# ಹುಣ್ಣಿಮೆ ಮಹಾಮಂಟಪಕ್ಕೆ ಬಿಚ್ಚುಗತ್ತಿ ಭರಮಣ್ಣ ನಾಯಕರ ಹೆಸರು : ಹರ್ಷ

ದಾವಣಗೆರೆ, ಫೆ. 11- ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆಯ ಮಹಾಮಂಟಪಕ್ಕೆ ಬಿಚ್ಚುಗತ್ತಿ ಭರಮಣ್ಣ ನಾಯಕರ ಹೆಸರನ್ನಿಟ್ಟಿರುವುದಕ್ಕೆ ನಾಯಕ ಸಮುದಾಯ ಹರ್ಷ ವ್ಯಕ್ತಪಡಿಸಿದೆ.

ಈ ನಿರ್ಧಾರ ಕೈಗೊಂಡಿರುವ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳನ್ನು ವಾಲ್ಮೀಕಿ ನಾಯಕ ಸಮುದಾಯದ ವತಿಯಿಂದ ಅಭಿನಂದಿಸಿದೆ.

ಚಿತ್ರದುರ್ಗ ಸಂಸ್ಥಾನದಲ್ಲಿ ಹಲವಾರು ಕೋಟೆ ಕೊತ್ತಲಗಳನ್ನು, ದೇಗುಲಗಳನ್ನು, ಕೆರೆ ಕಟ್ಟೆಗಳನ್ನು ನಿರ್ಮಿಸುವ ಮೂಲಕ ಅತ್ಯಂತ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಿದ ಕೀರ್ತಿ ಬಿಚ್ಚುಗತ್ತಿ ಭರಮಣ್ಣ ನಾಯಕರಿಗೆ ಸಲ್ಲುತ್ತದೆ ಎಂದು ಸಮಾಜದ ಮುಖಂಡ ಪಿ.ಬಿ. ಅಂಜುಕುಮಾರ್ ತಿಳಿಸಿದ್ದಾರೆ.

ಇಂತಹ ಅರಸರ ದೂರಾಲೋಚನೆಯಿಂದ ಅಂದಿನ ಕಾಲದಲ್ಲೇ ಜನರ ಒಳಿತಿಗಾಗಿ ನೀರಿನ ಮೂಲಗಳನ್ನು ಉಳಿಸುವಂತಹ ಯೋಚನೆ ಮಾಡಿದ್ದು, ಅಂದಿನ ಅರಸರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಇಂತಹ ಯೋಜನೆಗೆ ಮರು ಕಾಯಕಲ್ಪ ಕೊಟ್ಟ ತರಳಬಾಳು ಜಗದ್ಗುರುಗಳನ್ನು ಪಿ.ಬಿ. ಅಂಜುಕುಮಾರ್, ಡಿ.ಆರ್. ಅರವಿಂದಾಕ್ಷ, ಎ. ಲೋಹಿತ್ ಕುಮಾರ್, ಎನ್. ಗುರುರಾಜ್, ಪಿ.ಬಸಪ್ಪ, ಪಿ.ಎ.ಚಿರಂತ್, ಸುನೀಲ್ ಪಾಳೇಗಾರ್ ಮತ್ತಿತರರು ಭಕ್ತಿಯ ಅಭಿನಂದನೆ ಸಲ್ಲಿಸಿದ್ದಾರೆ.

## ಮೈಲಾರ ಜಾತ್ರೆ : ವಿಶೇಷ ಬಸ್ ಸೌಲಭ್ಯ

ದಾವಣಗೆರೆ, ಫೆ. 11 - ಇದೇ ದಿನಾಂಕ 14 ರಂದು ನಡೆಯುವ ಮೈಲಾರ ಕಾರಣಿಕೋತ್ಸವ ಪ್ರಯುಕ್ತ ನಾಡಿದ್ದು ದಿನಾಂಕ 13 ರಿಂದ 15 ರವರೆಗೆ ಕೆಎಸ್ಸಾರ್ಟಿಸಿ ದಾವಣಗೆರೆ ವಿಭಾಗ ದಿಂದ 75 ಹೆಚ್ಚುವರಿ ವಿಶೇಷ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿಭಾ ಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಷೇರು ಪೇಟೆ ಬಂಡವಾಳ ಮೌಲ್ಯ 16.97 ಲಕ್ಷ ಕೋಟಿ ರೂ. ಕುಸಿತ

ನವದೆಹಲಿ, ಫೆ. 11- ಕಳೆದ ಐದು ದಿನಗಳಲ್ಲಿ ಷೇರು ಪೇಟೆಯಲ್ಲಿ ಕುಸಿತವಾಗಿರುವ ಕಾರಣ ಮಾರುಕಟ್ಟೆಯ ಒಟ್ಟು ಮೌಲ್ಯ 16.97 ಲಕ್ಷ ಕೋಟಿ ರೂ.ಗಳಷ್ಟು ಇಳಿಕೆಯಾಗಿದೆ. ವಿದೇಶಿ ಬಂಡವಾಳ ಹೊರ ಹೋಗಿರುವುದು ಹಾಗೂ ಅಮೆರಿಕ ಹೊಸ ತೆರಿಗೆ ಘೋಷಿಸಿರುವುದು ಈ ಕುಸಿತಕ್ಕೆ ಕಾರಣವಾಗಿದೆ. ಕಳೆದ ಐದು ದಿನಗಳಲ್ಲಿ ಬಿಎಸ್‌ಇ ಸೂಚ್ಯಂಕ 2290.21 ಅಂಕಗಳಷ್ಟು ಕುಸಿದಿದೆ. ಇದು ಶೇಕಡಾ 2.91ರ ಕುಸಿತವಾಗಿದೆ. ಮಂಗಳವಾರ ಬಿಎಸ್‌ಇ ಸೂಚ್ಯಂಕ 1018.20 ಅಂಕಗಳಷ್ಟು ಕುಸಿದಿದೆ. ಇದು ಶೇಕಡ 1.32ರ ಕುಸಿತವಾಗಿದೆ. ಷೇರುಪೇಟೆ ಸೂಚ್ಯಂಕ ಎರಡು ವಾರಗಳಲ್ಲಿ ಅತಿ ಕಡಿಮೆ 76293.60ರಲ್ಲಿ ಅಂತ್ಯವಾಗಿದೆ.

## ಗೌರವಾನ್ವಿತ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**ಆರ್.ಎ. ನಂ. 27/2023**

ಅಪೀಲುದಾರರು : ರಾಮದಾಸ್ ಬಿನ್ ಪಾಂಡುರಂಗ ಶೇಟ್, ವಯಸ್ಸು ಸುಮಾರು 43 ವರ್ಷ, : ವಾಸ : ಮನೆ ನಂ. 34/4, ಎಂ.ಕೆ. ಬಿಲ್ಡಿಂಗ್ ಹಿಂಭಾಗ, ಡಿ.ಎ.ಮಲ್ಲಿಕಾರ್ಜುನಪ್ಪ ರಸ್ತೆ, ಬಸವರಾಜ ಪೇಟೆ, ದಾವಣಗೆರೆ-577 001. **ವಿರುದ್ಧ**

ಎದುರುದಾರರು : 4ಎ) ಶ್ರೀಮತಿ ಜಯಶ್ರೀ ಗಣೇಶಪ್ಪ ಬ್ಯಾಡಗಿ ಕೋಂ ಗಣೇಶಪ್ಪ, ವಯಸ್ಸು 70 ವರ್ಷಗಳು, 4ಬಿ) ಅನೂಪ್ ತಂದೆ ಗಣೇಶಪ್ಪ ಬ್ಯಾಡಗಿ, ವಯಸ್ಸು ಸುಮಾರು 37 ವರ್ಷಗಳು, ಈರ್ವರ ವಾಸ: ನಂಃ 509, 2ನೇ ಕ್ರಾಸ್, 3ನೇ ಮೇನ್, ಎಸ್.ಎಸ್. ಬಡಾವಣೆ, ದಾವಣಗೆರೆ.

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ನೀಡಿದ ಪತ್ರಿಕಾ ಪ್ರಕಟಣೆ ನೋಟೀಸು**

ಈ ಮೇಲ್ಕಾಣಿಸಿದ ಅಪೀಲುದಾರರು ಈ ಮೇಲೆ ತಿಳಿಸಿರುವ ಎದುರುದಾರರ 4(ಎ) ಮತ್ತು 4(ಬಿ) ಹಾಗೂ ಇತರರ ವಿರುದ್ಧ ಈ ಮೇಲೆ ತಿಳಿಸಿದ ನ್ಯಾಯಾಲಯದಲ್ಲಿ ಅಂತಿಮ ಡಿಕ್ರಿ ಸಂಖ್ಯೆ : ಎಫ್.ಡಿ.ಪಿ ನಂ: 9/2011 ರ ಅಂತಿಮ ಆದೇಶ ಪ್ರಶ್ನಿಸಿ ಅಪೀಲು ಸಲ್ಲಿಸಲಾಗಿರುತ್ತದೆ. ಈ ಮೇಲೆ ತಿಳಿಸಿದ 4(ಎ) ಮತ್ತು 4(ಬಿ) ಆದ ನೀವುಗಳು ಖುದ್ದಾಗಿಯಾಗಿಯಾಗಲೀ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ದಿನಾಂಕಃ 10.03.2025 ರಂದು ಬೆಳಗ್ಗೆ 11-00 ಗಂಟೆಗೆ ಈ ಮೇಲೆ ತಿಳಿಸಿದ ನ್ಯಾಯಾಲಯದಲ್ಲಿ ಹಾಜರಾಗಿ ನಿಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸಬಹುದಾಗಿರುತ್ತದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಈ ಅಪೀಲಿನಲ್ಲಿ ತೀರ್ಮಾನ ಕೈಗೊಳ್ಳಬೇಕಾಗುವುದು ತಿಳಿಯಿರಿ.

ನ್ಯಾಯಾಲಯದ ಆದೇಶದಂತೆ ಈ ದಿನ ದಿನಾಂಕ :11.02.2025 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ.

**ಚಮನ್‌ಸಾಬ್ ಅಂಗಡಿ**
ಅಪೀಲುದಾರರ ಪರ ವಕೀಲರು
ಸ್ಥಳ : ದಾವಣಗೆರೆ
ದಿನಾಂಕ 11.02.2025

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತ ಅಧಿಕಾರಿಗಳು
ಜಿಲ್ಲಾ ಮತ್ರ ಸತ್ರ ನ್ಯಾಯಾಲಯ, ದಾವಣಗೆರೆ.

## ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆ ಜಿಲ್ಲೆ

**ಪಿ & ಎಸ್.ಸಿ. ನಂಬರ್ : 8 : 2024**

**ಅರ್ಜಿದಾರರು : ಕುಮಾರಿ ದೀಪಾ ಆರ್. ಬಿನ್ ಲೇಟ್ ರಂಗನಾಥ್, ಸುಮಾರು 23 ವರ್ಷ , ವ್ಯವಸಾಯಗಾರರು, ಹೊದಿಗೆರೆ ಗ್ರಾಮ ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ**

**ವಿರುದ್ಧ - ಎದುರುದಾರರು :**

**1) ಎಂ. ರಾಜಪ್ಪ ಬಿನ್ ಲೇಟ್ ಮುನಿಸ್ವಾಮಿ 55 ವರ್ಷ, 2) ಎಂ. ವೆಂಕಟೇಶ್ ಬಿನ್ ಲೇಟ್ ಮುನಿಸ್ವಾಮಿ 53 ವರ್ಷ3) ಹಾಲಮೇಲಮ್ಮ ಕೋಂ. ಲೇಟ್ ಸುಬ್ರಮಣಿ 49 ವರ್ಷ, 4) ಶಶಿ ಬಿನ್ ಲೇಟ್ ಸುಬ್ರಮಣಿ 28 ವರ್ಷ 5) ಮಂಜಮ್ಮ ಕೋಂ. ಲೇಟ್ ಹರೀಶ್ 49 ವರ್ಷ, 6) ರಾಮು ಬಿನ್ ಲೇಟ್ ಹರೀಶ್, 30 ವರ್ಷ, 7) ಲಕ್ಷ್ಮಣ ಬಿನ್ ಲೇಟ್ ಹರೀಶ್, 30 ವರ್ಷ 8) ಗಿರೀಶ್ ಬಿನ್ ಲೇಟ್ ಹರೀಶ್, 28 ವರ್ಷ 9) ಪ್ರೇಮ ಬಿನ್ ಮುನಿಸ್ವಾಮಿ, 47 ವರ್ಷ 10) ಶಾಂತಮ್ಮ ಬಿನ್ ಮುನಿಸ್ವಾಮಿ, 45 ವರ್ಷ, 11) ಚಂದ್ರಮ್ಮ ಕೋಂ ಲೇಟ್ ಎಂ. ಶಂಕರಮೂರ್ತಿ, 35 ವರ್ಷ 12) ಕೃಷ್ಣಮೂರ್ತಿ ಬಿನ್ ಲೇಟ್ ಎಂ. ಶಂಕರಮೂರ್ತಿ 20 ವರ್ಷ, 13) ಮೇಘು ಬಿನ್ ಲೇಟ್ ಎಂ. ಶಂಕರಮೂರ್ತಿ 19 ವರ್ಷ, 14) ಬೇಬಿ ಬಿನ್ ಮುನಿಸ್ವಾಮಿ 41 ವರ್ಷ.**

**1 ರಿಂದ 14ನೇ ಎದುರುದಾರರ ವಿಳಾಸವು ವ್ಯವಸಾಯಗಾರರು, ಹೊದಿಗೆರೆ ಗ್ರಾಮ ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.**

### ಪತ್ರಿಕಾ ಪ್ರಕಟಣೆ

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು 2ನೇ ಹೋಬಳಿ, ಕೆಂಚಾಪುರ ಗ್ರಾಮದ ಸರ್ವೆ ನಂಬರ್ : 53 ರಲ್ಲಿ 2 ಎಕರೆ 13 ಗುಂಟೆ ಖರಾಬು 2 ಗುಂಟೆ ಖುಷ್ಕಿ ಮತ್ತು ಬಾಗಾಯ್ತು ಜಮೀನಿನ ಚಕ್ಕುಬಂದಿ : ಪೂರ್ವಕ್ಕೆ : ಗರಗದ ಈಶ್ವರಪ್ಪನವರ ಜಮೀನು, ಪಶ್ಚಿಮಕ್ಕೆ : ಗರಗದ ಗಿರಿಜಮ್ಮನವರ ಜಮೀನು, ಉತ್ತರಕ್ಕೆ : ಲೇಟ್ ಮಲ್ಲಪ್ಪನವರ ಜಮೀನು, ದಕ್ಷಿಣಕ್ಕೆ : ಲೇಟ್ ದೊಡ್ಡ ಗೋವಿಂದಸ್ವಾಮಿಯವರ ಜಮೀನು, ಈ ಮೇಲ್ಕಂಡ ಆಸ್ತಿಯ ಮೇಲೆ ಈ ಮೇಲ್ಕಂಡ ಮಾನ್ಯ ನ್ಯಾಯಾಲಯದಲ್ಲಿ ವಾರಸುದಾರರ ಕಾನೂನು ಅಡಿಯಲ್ಲಿ ಪ್ರೊಬೇಟ್ ಆದೇಶವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ, ಲೇಟ್ ಮುನಿಸ್ವಾಮಿ ಬಿನ್ ಲೇಟ್ ಪೆರುಮಾಳನಾಯ್ಕನವರು ಜೀವಂತ ಕಾಲದಲ್ಲಿ ವಿಲ್ ಯಾನೆ ಮರಣ ಶಾಸನ ಪತ್ರದ ಎಸ್.ಆರ್. ನಂಬರ್ : ಸಿ.ಎನ್.ಜಿ. 3/00202, 2011-2012 ಸಿ.ಡಿ. ನಂಬರ್, ಸಿ.ಎನ್.ಜಿ. ಡಿ. 63ರಲ್ಲಿ ದಿನಾಂಕ : 27.03.2012 ರಂದು ನೋಂದಣಿ ವಿಲ್ ಪತ್ರವನ್ನು ಚನ್ನಗಿರಿ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಸಾಕ್ಷಿದಾರರ ಸಮ್ಮುಖದಲ್ಲಿ ಅರ್ಜಿದಾರರ ಹೆಸರಿಗೆ ಬರೆಸಿಟ್ಟಿರುತ್ತಾರೆ. ಸದರಿ ಕೇಸ್‌ನಲ್ಲಿ ಅವರ ವಾರಸುದಾರರನ್ನು ಮತ್ತು ಕಾನೂನು ಪ್ರತಿನಿಧಿಗಳನ್ನು 1 ರಿಂದ 14 ಎದುರುದಾರರನ್ನು ಪಾರ್ಟಿ ಮಾಡಿದ್ದು, 10 ರಿಂದ 14ನೇ ಎದುರುದಾರರು ನೋಟೀಸ್ ಕೊಟ್ಟರೂ ಜಾರಿ ಮಾಡಿಕೊಡಿರುವುದಿಲ್ಲ. ಆದ ಪ್ರಯುಕ್ತ ಮಾನ್ಯ ನ್ಯಾಯಾಲಯಕ್ಕೆ ತಕರಾರು ಸಲ್ಲಿಸಿರುವವರಿದ್ದರೆ 10 ರಿಂದ 14ನೇ ಎದುರುದಾರರು ದಿನಾಂಕ : 25.3.2025 ರಂದು ಈ ಮೇಲ್ಕಂಡ ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ಕೇಸಿಗೆ ಖುದ್ದಾಗಲೀ ಅಥವಾ ಅವರ ವಕೀಲರ ಮುಖಾಂತರವಾಗಲೀ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸುವುದು, ಇಲ್ಲವಾದರೆ ಯಾರದ್ದೂ ಯಾವ ರೀತಿಯ ತಕರಾರು ಇರುವುದಿಲ್ಲವೆಂದು ಪರಿಗಣಿಸಿ, ಈ ಕೇಸ್ ತೀರ್ಮಾನಿಸಲ್ಪಡುವುದು ಎಂದು ತಿಳಿಯಿರಿ, ನ್ಯಾಯಾಲಯದ ಮುದ್ರೆ ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 11.2.2025 ರಂದು ನೀಡಲ್ಪಟ್ಟಿದೆ.

**ಸಹಿ/- ಅರ್ಜಿದಾರರ ಪರ ವಕೀಲರು**
**(ಜಿ.ಈ. ಶಿವಕುಮಾರ್)**
**ಫೋನ್ : 9448238946**

**ಸಹಿ/- ನ್ಯಾಯಾಲಯದ ಆದೇಶದ ಮೇರೆಗೆ**
**ಮುಖ್ಯ ಆಡಳಿತಾಧಿಕಾರಿ**

## ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

**ಇ.ಎಕ್ಸ್ ನಂ. 73/2024**

**ಡಿ.ಹೆಚ್.ಆರ್. : ಕೆ. ಬಾಷಾ ಸಾಬ್ ಬಿನ್ ಕರೀಂ ಸಾಬ್ ಸುಮಾರು 45 ವರ್ಷ, ವ್ಯವಸಾಯ, ವಾಸ : ಹುಲಿಕಟ್ಟೆ ಗ್ರಾಮ, ಹರಪನಹಳ್ಳಿ ತಾ. ಬಳ್ಳಾರಿ ಜಿ.**

**ವಿರುದ್ಧ/- ಜೆ.ಡಿ.ಆರ್. : ಶೇಖ್ ಶಬ್ಬೀರ್ ಯೂಸೂಫ್ ಬಿನ್ ಬಡೇಮಿಯಾ ಸುಮಾರು 38 ವರ್ಷ, ವಾಸ : 680/3, ಡಾಂಗೇ ಪಾರ್ಕ್ ಹತ್ತಿರ, ಭಗತ್ ಸಿಂಗ್ ನಗರ, ನಿಟುವಳ್ಳಿ ರಸ್ತೆ, ದಾವಣಗೆರೆ.**

### ಸಾರ್ವಜನಿಕ ಪ್ರಕಟಣೆಗಾಗಿ

ಡಿ.ಹೆಚ್.ಆರ್. ರವರು ಜೆ.ಡಿ.ಆರ್. ವಿರುದ್ಧ ದಾವಣಗೆರೆ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ (ಹಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಇ.ಎಕ್ಸ್.ನಂ. 73/2024 ಅಮ್ಲುಜಾರಿ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ತಿಳಿಸಿರುವ ಜೆ.ಡಿ.ಆರ್. ರವರಿಗೆ ನ್ಯಾಯಾಲಯವು ಹಲವಾರು ಬಾರಿ ಸಮನ್ಸ್ ಜಾರಿಗೊಳಿಸಿದರೂ ಹಾಜರಾಗದ ಕಾರಣ ಸದರಿ ಸಾರ್ವಜನಿಕ ಪ್ರಕಟಣೆಯ ಮೂಲಕ ನ್ಯಾಯಾಲಯಕ್ಕೆ ಜೆ.ಡಿ.ಆರ್.ರವರು ದಿ : 28.02.2025ರಂದು ಹಾಜರಾಗಲು ಮುದ್ದತ್ತನ್ನು ನೀಡಿದ್ದು, ಸದರಿ ಮುದ್ದತ್ತಿನಂದು ಜೆ.ಡಿ.ಆರ್.ರವರಾಗಲೀ, ಅವರ ಪರ ವಕೀಲರಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬಹುದು. ತಪ್ಪಿದ್ದಲ್ಲಿ ಏಕಪಕ್ಷೀಯ ಆದೇಶ ಮಾಡಲಾಗುವುದು ಎಂದು ತಿಳಿಸಲಾಗಿದೆ.

ಈ ದಿನ ದಿ. 6.2.2025 ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರ್‌ನೊಂದಿಗೆ ನೀಡಲಾಗಿದೆ.

**ದಿನಾಂಕ : 06.2.2025 ಸ್ಥಳ : ದಾವಣಗೆರೆ.**
**ಸಹಿ /- ಶ್ರೀ ಅನೀಸ್ ಪಾಷ**
**ಸಿ. ಸಿರಾಜುದ್ದೀನ್**
**ಡಿ.ಹೆಚ್.ಆರ್. ಪರ ವಕೀಲರು**
**ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್**
**ಅಂಬೇಡ್ಕರ್ ಸರ್ಕಲ್, ದಾವಣಗೆರೆ.**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು**
**1ನೇ ಹೆಚ್ಚುವರಿ ಸಿವಿಲ್ ಜಡ್ಜ್ (ಹಿ.ವಿ),**
**ನ್ಯಾಯಾಲಯ, ದಾವಣಗೆರೆ.**

# ಮೈಲಾರ ಪಾದಯಾತ್ರೆಗೆ ಚಾಲನೆ



ದಾವಣಗೆರೆ, ಫೆ.11- ಹೂವಿನ ಹಡಗಲಿ ತಾಲ್ಲೂಕಿನ ಶ್ರೀ ಕ್ಷೇತ್ರ ಮೈಲಾರದಲ್ಲಿ ಇದೇ ದಿನಾಂಕ 14ರಂದು ನಡೆಯುವ ಕಾರಣಿಕೋತ್ಸವ ನಿಮಿತ್ತ ನಗರದ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ವತಿಯಿಂದ 14ನೇ ವರ್ಷದ ಪಾದಯಾತ್ರೆಗೆ ಚಾಲನೆ ನೀಡಲಾಯಿತು.

ಕೇಸರಿ ಟೀ-ಶರ್ಟ್ ಧರಿಸಿದ ಪಾದಯಾತ್ರಿಗಳು ಭಂಡಾರದ ಒಡೆಯ ಮೈಲಾರ ಲಿಂಗೇಶ್ವರನಿಗೆ ಭಕ್ತಿ ಪೂರ್ವಕವಾಗಿ ಪೂಜೆ ಸಲ್ಲಿಸಿ, ಏಳು ಕೋಟಿ.. ಏಳು ಕೋಟಿಗೋ.. ಚಾಂಗ್ ಮಲೋ.. ಎಂಬ ಘೋಷಣೆ ಮೂಲಕ ದೇವರನ್ನು ಸ್ಮರಿಸಿದರು.

ಗಾಂಧಿ ನಗರ ಪೊಲೀಸ್ ಠಾಣೆಯ ಪಿಎಸ್ಐ ರವಿನಾಯ್ಕ್ ಅವರು ಪಾದಯಾತ್ರೆಗೆ ಕೇಸರಿ ಭಾವುಟ ಪ್ರದರ್ಶಿಸುವ ಮೂಲಕ ಮಂಗಳವಾರ ಸಂಜೆ ವಿಧ್ಯುಕ್ತ ಚಾಲನೆ ನೀಡಿದರು.


ಈ ವೇಳೆ ಮಾತನಾಡಿದ ಅವರು, ಪಾದಯಾತ್ರೆಯಲ್ಲಿ ತೊಡಗಿದ ಭಕ್ತರು ಒಗ್ಗಟ್ಟಿನಿಂದ ದೇವರ ಸನ್ನಿಧಿಗೆ ಹೋಗಬೇಕು. ಯಾತ್ರೆಯ ವೇಳೆ ರಸ್ತೆಯಲ್ಲಿ ಹೋಗುವಾಗ ಸಂಚಾರಿ ನಿಯಮ ಪಾಲಿಸುವ ಮೂಲಕ ಸುರಕ್ಷಿತವಾಗಿ ದೇವರ ದರ್ಶನ ಪಡೆಯಿರಿ ಎಂದು ಹೇಳಿದರು.

ಮಾಜಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಮೈಲಾರಲಿಂಗಪ್ಪನ ಭಕ್ತರು ಭಕ್ತಿಯಲ್ಲಿ ಶ್ರೀಮಂತರು. ಎಲ್ಲಾ ಸಮುದಾಯದವರು ಸೇರಿ ಮೈಲಾರ ಜಾತ್ರೆಯನ್ನು ವಿಜೃಂಭಣೆಯಿಂದ ಮಾಡು ತ್ತಾರೆ. ಇಂತಹ ಧಾರ್ಮಿಕ ಸಂಪ್ರದಾಯಗಳು ನಡೆಯುವುದರಿಂದಲೇ ಹಿಂದೂ ಧರ್ಮ ಉಳಿಯಲಿದೆ ಎಂದು ಹೇಳಿದರು.

ಈ ವೇಳೆ ಮಾಲತೇಶ್ ಜಾಧವ್, ಗುಡ್ಡಪ್ಪ, ವೈ. ಮಲ್ಲೇಶ್, ವೀರಣ್ಣ, ಕೆ. ಮಲ್ಲೇಶ್, ಮಲ್ಲಿಕಾರ್ಜುನ್, ಗೋಪಾಲ್ ಸಾವಂತ್, ಮೈಲಾರಲಿಂಗೇಶ್ವರ ದೇವಸ್ಥಾನ ಟ್ರಸ್ಟಿನ ಪದಾಧಿಕಾರಿಗಳು ಹಾಗೂ ಭಕ್ತರು ಇದ್ದರು.

























KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas